ನಾರಾಯಣ ಗುರು

ಡಾ: ನಾ.ದಾಮೋದರ ಶೆಟ್ಟಿ



ಕರ್ನಾಟಕ ಸಾಹಿತ್ಯ ಅಕಾಡೆಮಿ

ಸಾಮಾಜಿಕ ಚಿಂತನಮಾಲೆ

ನಾರಾಯಣಗುರು

ಡಾ|| ನಾ. ದಾಮೋದರ ಶೆಟ್ಟಿ

ಕರ್ನಾಟಕ ಸಾಹಿತ್ಯ ಅಕಾಡೆಮಿ
ನೃಪತುಂಗ ರಸ್ತೆ, ಬೆಂಗಳೂರು - ೫೬೦ ೦೦೨

NARAYANAGURU - Written by Dr.N. Damodara Shetty and Published by Karnataka Sahitya Akądemy, Nrupatunga Road, Bangalore-560 002.

First Publication - 1994 Pages : viii+60

ಹಕ್ಕುಗಳು : ಲೇಖಕರವು

ಮೊದಲನೇ ಮುದ್ರಣ : ೧೯೯೪

ವಿಶೇಷ ನೆರವು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಪ್ರಧಾನ ಸಂಪಾದಕರು:

ಬರಗೂರು ರಾಮಚಂದ್ರಪ್ಪ

ಅಧ್ಯಕ್ಷರು

ಕರ್ನಾಟಕ ಸಾಹಿತ್ಯ ಅಕಾಡೆಮಿ

ಪ್ರಕಾಶಕರು:

ರಿಜಿಸ್ಟ್ರಾರ್

ಕರ್ನಾಟಕ ಸಾಹಿತ್ಯ ಅಕಾಡೆಮಿ

ರಕ್ಷಾಪುಟ ವಿನ್ಯಾಸ:

ಪಿ.ಚಂದ್ರಶೇಖರ್

ಬೆಲೆ : ಎರಡು ರೂಪಾಯಿಗಳು

ಮುದ್ರಕರು :

ಲಾವಣ್ಯ ಮುದ್ರಣ

೧೯, ವಿದ್ಯಾಪೀಠ ಸರ್ಕಲ್,

ಬೆಂಗಳೂರು - ೫೬೦ ೦೫೦

ಅಧ್ಯಕ್ಷರ ಮಾತು

ಸಮಾಜದಲ್ಲಿ ಸಮಾನತೆ, ಸಾಮರಸ್ಯಗಳು ನೆಲೆಯೂರಬೇಕೆಂಬ ಆಶಯಕ್ಕೆ ಒಂದು ಇತಿಹಾಸವಿದೆ. ವಿವಿಧ ಕಾಲಘಟ್ಟಗಳಲ್ಲಿ ಬದುಕನ್ನು ಅಂತಃಕರಣಪೂರ್ವಕವಾಗಿ ಪ್ರೀತಿಸಿದ ಚೇತನಗಳು, ಆರೋಗ್ಯಕರ ಚಲನಶೀಲತೆಗೆ ಒತ್ತಾಸೆಯಾಗಿವೆ. ಇದು ಹೊಸ ಬೆಳಕನ್ನು ಹುಡುಕುವ ಒಂದು ಹೋರಾಟ; ಅಂತೆಯೇ ಇರುವ ಬೆಳಕನ್ನು ಕಾಯ್ದುಕೊಳ್ಳುವ ವಿಶಿಷ್ಟ ಕಾಳಜಿ. ಅದೇ ಸಂದರ್ಭದಲ್ಲಿ ಹಗಲಲ್ಲೇ ಕತ್ತಲು ಮೂಡಿಸುವ ಕರಾಳ ಪ್ರಯತ್ನಗಳಿಗೇನೂ ಕಡಿಮೆಯಿಲ್ಲ. ಬೆಳಕಿನ ಕಿರಣಗಳನ್ನು ಕತ್ತಲ ಕೋಣೆಯಲ್ಲಿ ಕೂಡಿ ಹಾಕುವ ಇಂಥ ಸ್ವಾರ್ಥ ಶಕ್ತಿಗಳಿಗೂ ಚಲನಶೀಲ ಪರವಾದ ಚೇತನಗಳಿಗೂ ಮುಖಾಮುಖಿ ಅನಿವಾರ್ಯ. ವ್ಯಕ್ತಿ ಮತ್ತು ಸಂದರ್ಭಗಳಿಗನುಗುಣವಾಗಿ ಮುಖಾಮುಖಿಯ ಸ್ವರೂಪದಲ್ಲಿ ವ್ಯತ್ಯಾಸಗಳಿರಬಹುದು; ಕಾರ್ಯಕ್ಷೇತ್ರಗಳಲ್ಲಿ ವಿಭಿನ್ನತೆಯಿರಬಹುದು. ಆದರೆ ಆಯಾ ನೆಲೆಯಲ್ಲಿ ಜಡತೆಯನ್ನು ಮೀರುವ ಮನೋಧರ್ಮ ಮುಖ್ಯವಾಗುವ ಮುಖಾಮುಖಿಯು ಮಹತ್ವದ್ದೇ ಆಗಿರುತ್ತದೆ.

ಸಾಮಾಜಿಕ ಸನ್ನಿವೇಶವೊಂದು ಉಂಟುಮಾಡುವ ಸೈದ್ಧಾಂತಿಕ ಮುಖಾಮುಖಿ ಮತ್ತು ಅದರ ಫಲಿತಗಳು ಇದ್ದಕ್ಕಿದ್ದಂತೆ ಸಂಭವಿಸುವುದಿಲ್ಲ. ಇದಕ್ಕೂ ಒಂದು ಚರಿತ್ರೆಯಿರುತ್ತದೆ. ಆದ್ದರಿಂದ ಚಾರಿತ್ರಿಕತೆಯನ್ನು ಪರಿಗಣಿಸಿಯೇ ನಾವು ಸಾಮಾಜಿಕ ಚಿಂತನೆಯನ್ನು ಪರಿಶೀಲಿಸುವುದು ಆರೋಗ್ಯಕರವಾದುದು. ನಿರ್ದಿಷ್ಟ ಕಾಲದ ಚಲನಶೀಲ ಚಿಂತನೆ ಸಮಕಾಲೀನ ಸಂದರ್ಭದಲ್ಲಿ ಹಳೆಯದಾಗಬಹುದಾದರೂ, ಹೊಸ ಚಿಂತನೆಗಳಿಗೆ ಚಾರಿತ್ರಿಕ ಒತ್ತಾಸೆಯನ್ನೂ ಪ್ರಗತಿಪರ ಪರಂಪರೆಯನ್ನೂ ಅದು ಒದಗಿಸಿರುತ್ತದೆಯೆಂಬುದನ್ನು ನಾವು ಮರೆಯಲಾಗದು. ಆಯಾ ಚಾರಿತ್ರಿಕ ಸಂದರ್ಭವನ್ನು ಪರಿಗಣಿಸಿಯೇ ಸಮಕಾಲೀನ ವಿವೇಕದ ಮೂಲಕ ಎಲ್ಲ ಕಾಲದ ಚಿಂತನೆಗಳನ್ನು ತೂಗಿ ನೋಡುವ ಮೂಲಕ

ಆತುರದ, ಅತಿರೇಕದ ತೀರ್ಪುಗಳಿಂದ ನಾವು ಪಾರಾಗುತ್ತೇವೆ. ಸರಿದಾರಿಯಲ್ಲಿ ಹೆಜ್ಜೆಯಿಡುತ್ತೇವೆ. ಆಯಾ ಕಾಲದ ಸಾಮಾಜಿಕ ಚಿಂತನೆಗಳ ಚಲನಶೀಲತೆಯನ್ನು ಮೆಚ್ಚುತ್ತ, ಮಿತಿಗಳನ್ನು ಗುರುತಿಸಿ ಮೀರುತ್ತಾ, ಹೊಸ ಮನೋಧರ್ಮವನ್ನು ರೂಪಿಸಿಕೊಳ್ಳುವುದು, ಚಿಂತನೆಗೆ ಹೊಸ ಆಯಾಮಗಳನ್ನು ಕಂಡುಕೊಳ್ಳುವುದು ಸಮಕಾಲೀನತೆಯ ಸತ್ವವಾಗಬಲ್ಲದು.

ಒಟ್ಟು ವಿಶ್ವದಲ್ಲಿ ಭಕ್ತರು, ಸಂತರು, ಸಮಾಜ ಸೇವಕರು, ರಾಜಕಾರಣಿಗಳು ವಿಜ್ಞಾನಿಗಳು, ಕವಿ - ಕಲಾವಿದರು, ಕ್ರಾಂತಿಕಾರಿಗಳು - ಹೀಗೆ ವಿವಿಧ ನೆಲೆಗಳಲ್ಲಿ ಬದುಕನ್ನು ಕಂಡು ಕೊಳ್ಳುವ ಮತ್ತು ಕಟ್ಟುವ ಕ್ರಿಯಾಶೀಲತೆ ತೋರಿದವರೆಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಸಾಮಾಜಿಕ ಚಿಂತಕರೇ ಆಗಿದ್ದಾರೆ. ಇವರ ನಂಬಿಕೆ, ನಿಲುವು ಮತ್ತು ಮಾರ್ಗಗಳು ಬೇರೆ ಬೇರೆಯಿರಬಹುದು. ಆದರೆ ತಂತಮ್ಮ ಕಾರ್ಯಕ್ಷೇತ್ರದ ಚೌಕಟ್ಟಿನಲ್ಲಿ ಯಥಾಸ್ಥಿತಿಯನ್ನು ಮೀರುತ್ತ, ಮುಂದೆ ಜಡ ಚೌಕಟ್ಟುಗಳನ್ನು ಛಿದ್ರ ಮಾಡಿ ಹೊಸ ಹಾದಿ ಹುಡುಕುವುದಕ್ಕೆ, ಹೊಸ ಚಿತ್ರ ಬರೆದು ಹೊಸ ಚೌಕಟ್ಟು ನಿರ್ಮಿಸುವುದಕ್ಕೆ ಪ್ರೇರಣೆಯಾಗಿರುವುದಂತೂ ನಿಜ. ಪರಸ್ಪರ ವಿರುದ್ಧ ನೆಲೆಗಳಿಗೆ ಸೇರಿದ ಇವರು ತಮ್ಮೆಲ್ಲ ಮಿತಿ ಮತ್ತು ವ್ಯಾಪ್ತಿಯೊಂದಿಗೆ ಚಾರಿತ್ರಿಕ ಮಹತ್ವ ಪಡೆಯುತ್ತಾರೆ. ಯಾಕೆಂದರೆ ಸಾಮಾಜಿಕ ಚಿಂತಕರು ಯಾವುದೇ ಕ್ಷೇತ್ರಕ್ಕೆ ಸಂಬಂಧಿಸಿರಲಿ, ಯಾವುದೇ ಸೈದ್ಧಾಂತಿಕ ಸ್ವರೂಪವನ್ನು ಹೊಂದಿರಲಿ, ಅವರವರ ಸಂದರ್ಭದಲ್ಲಿ ಮೂಲಭೂತವಾದಿ ಮನೋಧರ್ಮವನ್ನು ಪಡೆದಿರುವುದಿಲ್ಲ; ಜಡಜೈಲುಗಳನ್ನು ನಿರ್ಮಿಸುವುದಿಲ್ಲ; ಅಸಮಾನತೆಯನ್ನು ಒಪ್ಪುವುದಿಲ್ಲ; ಅಮಾನವೀಯತೆಯನ್ನು ಪೋಷಿಸುವುದಿಲ್ಲ. ಆದರೆ ಆದ್ಯತೆಗಳಲ್ಲಿ ಅಂತರವಿರಬಹುದು; ಚಿಂತನೆಯಲ್ಲಿ ವೈರುಧ್ಯಗಳಿರಬಹುದು. ಒಟ್ಟಾರೆ ಒಂದಷ್ಟು ಮರು ಚಿಂತನೆಗೆ ಒತ್ತಾಸೆಯಾಗಿ ತಾವು ಬದುಕಿದ ಪರಿಸರಕ್ಕೆ ಮಾನವೀಯ ಮಿಡಿತ ತರುವ ಪ್ರಾಮಾಣಿಕ ಪ್ರಯತ್ನದಲ್ಲಿ ತೊಡಗಿರುತ್ತಾರೆ.

ಮೇಲೆ ವಿವರಿಸಿದ ವಿಶಾಲ ವ್ಯಾಪ್ತಿಯ ಹಿನ್ನೆಲೆಯಲ್ಲಿ 'ಸಾಮಾಜಿಕ ಚಿಂತನ ಮಾಲೆ'ಯನ್ನು ರೂಪಿಸಲಾಗಿದೆ. ಕನ್ನಡದ ಸಾಮಾನ್ಯ ಓದುಗರನ್ನು ಗಮನದಲ್ಲಿಟ್ಟು ಕೊಂಡು ರೂಪುಗೊಂಡಿರುವ ಈ ಮಾಲೆಯ ಪುಸ್ತಕಗಳು ಏಕಕಾಲಕ್ಕೆ

ಪರಿಚಯಾತ್ಮಕವೂ, ಚಿಂತನಾತ್ಮಕವೂ ಆಗಿರಬೇಕೆಂದು ಅಪೇಕ್ಷಿಸಲಾಗಿದೆ. ಒಟ್ಟಿನಲ್ಲಿ ಇದು, ಸಾಮಾನ್ಯ ಓದುಗರು ಸಾಮಾಜಿಕ ಚಿಂತನೆಯ ವಿವಿಧ ವಿನ್ಯಾಸಗಳನ್ನು ಅರಿವಿಗೆ ತಂದು ಕೊಂಡು ಹೆಚ್ಚಿನ ಓದಿಗೆ ಆಸಕ್ತರಾಗುವಂತೆ ಮಾಡುವ ಒಂದು ವಿನಯಪೂರ್ವಕ ಪ್ರಯತ್ನವಾಗಿದೆ.

ಈ ಸಂದರ್ಭದಲ್ಲಿ ಒಂದು ಮುಖ್ಯ ಸಂಗತಿಯನ್ನು ಹೇಳಲೇಬೇಕು. ಸಾಮಾಜಿಕ ಚಿಂತನ ಮಾಲೆಯು ಈ ರೂಪವನ್ನು ಪಡೆಯುವುದಕ್ಕೆ ಮೊದಲು ಪ್ರೇರಣೆ ಒದಗಿಸಿದವರು ಅಂದಿನ ಕನ್ನಡ ಮತ್ತು ಸಂಸ್ಕೃತಿ ಸಚಿವರಾಗಿದ್ದ ಶ್ರೀ ಎಚ್.ವಿಶ್ವನಾಥ್ ಅವರು; ಶ್ರೀ ವಿಶ್ವನಾಥ್ ಅವರಿಗೆ ಕೆಲವು ಸಮಾಜ ಸುಧಾರಕರ ಬಗ್ಗೆ ಕಿರುಪುಸ್ತಕಗಳನ್ನು ಅಚ್ಚು ಮಾಡಿಸಿ ಕಡಿಮೆ ಬೆಲೆಗೆ ಒದಗಿಸಬೇಕೆಂಬ ಮಹದಾಕಾಂಕ್ಷೆಯಿತ್ತು. ಈ ಕೆಲಸವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿ ಯೋಜನೆಯೊಂದನ್ನು ಸಿದ್ಧಪಡಿಸುವ ಸಂಪೂರ್ಣ ಹೊಣೆಗಾರಿಕೆಯನ್ನು ನೀಡಿದ್ದಲ್ಲದೆ, ಈ ಯೋಜನೆಗಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ವಿಶೇಷ ಅನುದಾನವನ್ನು ಮಂಜೂರು ಮಾಡಿದರು. ಶ್ರೀ ವಿಶ್ವನಾಥ್ ಅವರ ಸಹಕಾರವನ್ನು ಕೃತಜ್ಞತೆಯಿಂದ ನೆನೆಯುವುದು ನನ್ನ ಕರ್ತವ್ಯವಾಗಿದೆ.

ಇದೇ ಸಂದರ್ಭದಲ್ಲಿ ಸಹಕಾರವನ್ನು ಮುಂದುವರೆಸಿದ ಇಂದಿನ ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ಶ್ರೀ ಆರ್.ಎನ್.ನಾಯಕ್ ಅವರಿಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಪ.ರಾ.ಕುಲಕರ್ಣಿಯವರಿಗೂ, ಕಾರ್ಯದರ್ಶಿಗಳಾದ ಡಾ: ಪಿ.ಎಸ್.ರಾಮಾನುಜಂ ಅವರಿಗೂ ಧನ್ಯವಾದಗಳು.

ಸಾಮಾಜಿಕ ಚಿಂತನ ಮಾಲೆಯ ಪುಸ್ತಕಗಳನ್ನು ಬರೆದುಕೊಟ್ಟ ಎಲ್ಲ ಲೇಖಕರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತ ಕನ್ನಡ ಓದುಗರು ಈ ಪುಸ್ತಕಗಳನ್ನು ಓದಿ ಅಕಾಡೆಮಿಯ ಆಶಯವನ್ನು ಸಾರ್ಥಕಗೊಳಿಸಬೇಕೆಂದು ವಿನಂತಿಸುತ್ತೇನೆ.

ಬರಗೂರು ರಾಮಚಂದ್ರಪ್ಪ
ಅಧ್ಯಕ್ಷರು.

ಅಕ್ಟೋಬರ್ ೧೯೯೪
ಬೆಂಗಳೂರು

ಲೇಖಕರ ಮಾತು

ಈ ಪುಸ್ತಕ ರಚನೆಯ ಅವಕಾಶ ಒದಗಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ಮತ್ತು ಈ ಕೆಲಸದಲ್ಲಿ ಸಹಕಾರ ನೀಡಿದ ಸ್ನೇಹಿತರಿಗೆ, ಹಿತೈಷಿಗಳಿಗೆ ಕೃತಜ್ಞತೆಗಳು.

ನವೆಂಬರ್ ೧೯೯೪ ನಾ. ದಾಮೋದರ ಶೆಟ್ಟಿ

ನಾರಾಯಣ ಗುರು

ಅಧ್ಯಾಯ ೧

ಪೀಠಿಕೆ

ಹತ್ತೊಂಬತ್ತನೆಯ ಶತಮಾನದ ಅಂತ್ಯಭಾಗದವರೆಗೆ ಕೇರಳದುದ್ದಕ್ಕೂ ಜಾತಿ ಪದ್ಧತಿ ತನ್ನೆಲ್ಲ ಶಕ್ತಿಸಾಮರ್ಥ್ಯಗಳೊಂದಿಗೆ ತಾಂಡವವಾಡುತ್ತಿತ್ತು. ಆ ಕಾಲದಲ್ಲಿ ಸವರ್ಣೀಯರು. ಅವರ್ಣೀಯರು ಎಂಬುದಾಗಿ ಸ್ಪಷ್ಟ ವಿಭಜನೆ ಮಾಡಿಕೊಂಡು ಸಮಾಜ ಸಾಗುತ್ತಿತ್ತು. ಬ್ರಾಹ್ಮಣರು ತಮ್ಮ 'ಅತ್ಯುತ್ತಮ' ಜಾತಿಯನ್ನು ಹೊರತುಪಡಿಸಿದರೆ ಮಿಕ್ಕವರೆಲ್ಲರನ್ನು. ಅವರು ವೈಶ್ಯರಿರಲಿ, ಕ್ಷತ್ರಿಯರಿರಲಿ, ಶೂದ್ರರಿರಲಿ-'ಒಂದೇ ಜಾತಿ' ಎಂದು ಪರಿಗಣಿಸುತ್ತಿದ್ದರು. ಆ ಪ್ರವಾಹದಲ್ಲಿ ಕೇರಳದ ಪ್ರತಿಷ್ಠಿತ ಜಾತಿಗಳಲ್ಲೊಂದಾದ ನಾಯರ್ ಸಮುದಾಯ ಕೂಡ ಕೊಚ್ಚಿ ಹೋಗಿತ್ತು. ಆ ಸಮುದಾಯಕ್ಕಿಂತ ಕೆಳಗಿನವರೆಂದು ಪರಿಗಣಿಸಲ್ಪಡುತ್ತಿದ್ದ ಈಳವರು ಬಹುಸಂಖ್ಯಾತರಾಗಿದ್ದರೂ ಪಂಚಮರಂತೆ ಅಸ್ಪೃಶ್ಯರಾಗಿ ಬದುಕಬೇಕಾಗಿದ್ದ ಕಾಲವದು.

'ನಂಬೂದಿರಿಗಳು ಬರುತ್ತಿದ್ದಾರೆ' ಎಂಬುದನ್ನು ಸೂಚಿಸುವ ಕೂಗು ದೂರದಿಂದ ಕೇಳಿಬರುತ್ತಲೇ ಈಳವರು ಹಾಗೂ ಅವರಂತೆಯೇ ಅಸ್ಪೃಶ್ಯರೆನಿಸಿಕೊಂಡವರು ರಸ್ತೆಯಲ್ಲೆಲ್ಲೂ ಕಾಣಿಸಕೂಡದು. ನಂಬೂದಿರಿ ಹಾಗೂ ಅವರ್ಣೀಯರ ನಡುವೆ ನೇರ ಸಂಪರ್ಕವಿರಲಿಲ್ಲ. ಅದು ಏನಿದ್ದರೂ ನಾಯರ್ ಸಮುದಾಯದವರ ಮೂಲಕ. ನಂಬೂದಿರಿಗಳು ನಡೆದು ಹೋಗುವಾಗ ನಾಯರ್, ಆತನಿಗಿಂತ ಮುಂದೆ ಹೋಗಿ 'ಹೋ' ಎಂಬ ಕೂಗನ್ನೆಬ್ಬಿಸುತ್ತ ನಡೆಯುತ್ತಿರುತ್ತಾನೆ. ಈಳವರು ನಂಬೂದಿರಿಗಿಂತ ಮೂವತ್ತೆರಡು ಅಡಿ ದೂರದಲ್ಲಿಯೂ ಅವರಿಗಿಂತ ಕೆಳಗಿನ ಪಂಚಮರು ಅರವತ್ನಾಲ್ಕು ಅಡಿಗಳಷ್ಟು ದೂರವೂ ನಿಂತುಕೊಳ್ಳಬೇಕು.

ಕೇರಳದುದ್ದಕ್ಕೂ ಇರುವ ದೇವಾಲಯಗಳು ಅವರ್ಣೀಯರ ಪ್ರವೇಶವನ್ನು ನಿಷೇಧಿಸಿತ್ತು. ದೇವಾಲಯದ ಪರಿಸರದ ರಸ್ತೆಗಳಲ್ಲಿ ಅವರು ಸಂಚರಿಸದಂತೆ ಫಲಕಗಳನ್ನು ತೂಗುಹಾಕಲಾಗುತ್ತಿತ್ತು. ಬ್ರಾಹ್ಮಣರ ಒತ್ತಾಯದ ಮೇರೆಗೆ ಸರಕಾರವೇ ಈ ಕೆಲಸವನ್ನು ಮಾಡುತ್ತಿತ್ತು.

ಬ್ರಾಹ್ಮಣರ ಶಾಲೆಗಳಲ್ಲಿ ಅವರ್ಣೀಯ ಮಕ್ಕಳಿಗೆ ಪ್ರವೇಶವಿರಲಿಲ್ಲ. ಅಂದಿನ ಬ್ರಿಟಿಷ್ ಸರಕಾರ ಬ್ರಾಹ್ಮಣರ ಪರವಾಗಿದ್ದುದು ಮಾತ್ರವಲ್ಲದೆ ಇಪ್ಪತ್ತನೆಯ ಶತಮಾನದ ಆದಿಯವರೆಗೆ ಕೆಳಸ್ತರದವರು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಿಕೊಳ್ಳಬೇಕೆಂದು ಸಲ್ಲಿಸುತ್ತಿದ್ದ ಅರ್ಜಿಗಳನ್ನು ಕ್ಷುಲ್ಲಕ ನೆಪನೀಡಿ ತಳ್ಳಿ ಹಾಕುತ್ತಿದ್ದರು.

ಅವರ್ಣೀಯರಿಗೆ ಚಿನ್ನ, ಬೆಳ್ಳಿಯ ಆಭರಣಗಳನ್ನು ಧರಿಸುವ ಅಧಿಕಾರವಿಲ್ಲದ ಕಾಲ ಅದಾಗಿತ್ತು. ಅದಕ್ಕೆ ಮೇಲ್ವರ್ಣದವರ ಅನುಮತಿಬೇಕಾಗಿತ್ತು.

ಸ್ವಾತಿ ತಿರುನಾಳರ ಆಳ್ವಿಕೆಯ (೧೮೨೯-೧೮೪೭) ಕಾಲಘಟ್ಟದಲ್ಲಿ ಇಂಗ್ಲೀಷ್ ವಿದ್ಯಾಭ್ಯಾಸ ಕೇರಳಕ್ಕೆ ಕಾಲಿಟ್ಟಿತು. ೧೮೫೯ರಲ್ಲಿ ಮೊದಲ ಬಾರಿಗೆ ಅವರ್ಣೀಯ ಸ್ತ್ರೀಯರಿಗೆ ಕುಪ್ಪಸ ತೊಡುವ ಅವಕಾಶ ನೀಡಲಾಯಿತು. ಬ್ರಿಟಿಷ್ ಆಳ್ವಿಕೆಯಲ್ಲಿ ಇಂತಹ ಸಣ್ಣ ಪುಟ್ಟ ಬದಲಾವಣೆಗಳು ಕಾಣಿಸಿಕೊಳ್ಳ ತೊಡಗಿದವು.

ಕೆಳವರ್ಗದವರನ್ನು ಹೊಡೆಯುವ ಬಡಿಯುವ ಅಧಿಕಾರ ಮೇಲ್ಜಾತಿಯವರಿಗೆ ಪಾರಂಪರ್ಯದಲ್ಲಿ ಬಂದುದಾಗಿತ್ತು. ಮೈಲಿಗೆಗೆ ಕಾರಣನಾದವನನ್ನು ಹೊಡೆಯುವುದು ನ್ಯಾಯವಾದುದು ಎಂದು ತಿಳಿಯಲಾಗಿತ್ತು. ಅದನ್ನು ಕೆಳಜಾತಿಯವರೂ ಒಪ್ಪಿಕೊಂಡಿದ್ದರು. ಕೆಳವರ್ಗದವರನ್ನು ಮುಟ್ಟಿ ಮೈಲಿಗೆಯಾದಾತ ಇನ್ನೊಬ್ಬ ಸ್ವಜಾತಿಯನನ್ನು ಮುಟ್ಟಕೂಡದು. ಹಾಗೆ ಮಾಡಿದರೆ ಅವನೂ ಮೈಲಿಗೆಯಾಗುತ್ತಾನೆ! ಮೈಲಿಗೆ ಮಾಡಿಕೊಂಡಾತ ಶುದ್ಧಿಮಾಡದೇ ಮನೆಯೊಳಕ್ಕೆ ಪ್ರವೇಶ ಮಾಡಿದರೆ ಆ ಮನೆ ಕೂಡ ಮೈಲಿಗೆಯಾಗುತ್ತದೆ.

ಅವರ್ಣೀಯನು ಮರದ ಮೇಲಿದ್ದಾಗ ಅಡಿಯಿಂದ ದಾಟಿದ ಸವರ್ಣೀಯ ಮೈಲಿಗೆಯಾಗುತ್ತಾನೆ. ಸವರ್ಣರು ಹತ್ತಿದ ದೋಣಿಯಲ್ಲಿ ಅವರ್ಣರು ಹತ್ತಕೂಡದು. ಅವರ್ಣರು ಕಾಯಕದಲ್ಲಿ ತೊಡಗಿರುವ ಪ್ರದೇಶದಲ್ಲಿ ಹಸಿಸೊಪ್ಪನ್ನು ಮಣ್ಣರಾಶಿಯನ್ನು ಕೂಡಿಹಾಕಬೇಕು. ಅದನ್ನು ನೋಡಿದ ಸವರ್ಣರು ಬೇರೆ ದಾರಿ ಹಿಡಿದು ಹೋಗುತ್ತಾರೆ!

ದೇವಸ್ಥಾನಕ್ಕೆ ಅವರ್ಣೀಯರು ದೀಪದೆಣ್ಣೆ ಕೊಡುವುದಿದ್ದರೆ ಅದನ್ನು ಕ್ರಿಸ್ತರವನ ಮೂಲಕ ಕೊಡಿಸಬಹುದು.

''ತೈಲಾದಿ ವಸ್ತುಗಳ ಶುದ್ಧವಾದರೆ ಪೌಲೋಸಿನಿಂದ ಮುಟ್ಟಿಸಿಕೊಳ್ಳಬೇಕು'' ಎಂಬ ಜನಜನಿತ ಮಾತೇ ಇದೆ.

ಸರಕಾರಿ ಕೆಲಸಗಳಲ್ಲಿ ಅಂದು ಸವರ್ಣರು ಮಾತ್ರ ಇದ್ದರು. ಈಳವರೇ ಮೊದಲಾದವರು ತೆರಿಗೆ ಕಟ್ಟಲು ಹೋದರೆ ಆ ಹಣವನ್ನು ಕಛೇರಿಯ ದೂರದ ಒಂದು ನಿಗದಿತ ಸ್ಥಾನದಲ್ಲಿ ಇರಿಸಬೇಕು.

ಕೆಳವರ್ಗದವರಲ್ಲೂ ಅನೇಕ ಉಪಜಾತಿಗಳಿದ್ದುದರಿಂದ ಆಯಾ ಜಾತಿಯವರು ಅವರವರ ಸ್ಥಾನಮಾನಕ್ಕನುಗುಣವಾಗಿ ಇತರರಿಗಿಂತ ತುಸು ಮುಂದೆ ಅಥವಾ ತುಸು ಹಿಂದೆ ಸ್ಥಾನ ಪಡೆದು ತೃಪ್ತಿಪಟ್ಟುಕೊಳ್ಳುತ್ತಿದ್ದರು.

ತಿರುವಾಂಕೂರಿನ ಸ್ಥಿತಿಗತಿಯ ಕುರಿತು ರೇ ಎಸ್. ಮೇಟ್ಟಿಯವರು ದಾಖಲಿಸಿದ ಒಂದು ವಿವರಣೆಯನ್ನಿಲ್ಲಿ ಗಮನಿಸಬಹುದು. "ಅವರ್ಣರು ಸಾರ್ವಜನಿಕ ರಸ್ತೆಗಳ ಉಪಯೋಗ ಮಾಡುವುದನ್ನು ನಿಷೇಧಿಸಲಾಗಿದೆ. ನಾಯರ್ ಜನಾಂಗದವನನ್ನು, ಮೈಲಿಗೆ ಮಾಡುವ ಅವರ್ಣೀಯನ್ನು ನಾಯರ್ ಕೊಚ್ಚಿ ತುಂಡರಿಸಬಹುದು. ಹೀಗಿರುವ ಜಾತಿಯವರನ್ನು ಗುರುತಿಸುವುದಕ್ಕಾಗಿ ಅವರು ಸೊಂಟದ ಮೇಲೆ ಉಡುಪು ತೊಡುವುದನ್ನು ನಿಷೇಧಿಸಲಾಗಿದೆ. ಚಪ್ಪಲಿ, ಕೊಡೆ, ವಿಶೇಷ ವಸ್ತ್ರಗಳು, ಬೆಲೆಬಾಳುವ ಆಭರಣಗಳು ಮುಂತಾದವನ್ನು ಅವರು ಧರಿಸಕೂಡದು. ಅದು ಬ್ರಾಹ್ಮಣರ ಹಕ್ಕು. ಭಾರಿ ಮಳೆಗೂ ಮಿಕ್ಕವರು ಕೊಡೆ ಹಿಡಿಯಬಾರದು. ಮೇಲ್ಜಾತಿಯವರಿಗೆ ಗೌರವ ತೋರಿಸುವುದಕ್ಕಾಗಿ ಕೆಳಜಾತಿಯ ಸ್ತ್ರೀಯರು ತಮ್ಮ ಎದೆಯಿಂದ ಸೆರಗನ್ನು ತೆಗೆಯಬೇಕು."

ತಪ್ಪಿತಸ್ಥರಿಗೆ ಶಿಕ್ಷೆ ನೀಡುತ್ತಿದ್ದ ಕ್ರಮ ಇನ್ನೂ ವಿಚಿತ್ರವಾಗಿದೆ. ಬ್ರಾಹ್ಮಣರು ಕೊಲೆ ಮಾಡಿದರೂ ಅವರಿಗೆ ಅಂಥ ಶಿಕ್ಷೆ ಇಲ್ಲ. ಶೂದ್ರರು ಅವರ್ಣೀಯರ ತಲೆಹಾರಿಸಲೂಬಹುದು. ಕಂಬಕ್ಕೆ ಕಟ್ಟಿಹಾಕಿ ಸರಿಗೆಯಿಂದ ಬಿಗಿದು ಎರಡು ಮೂರು ದಿನಗಳ ಕಾಲ

...ಅಂಥೆಯೇ ನರಳಿ ಸಾಯುವಂತೆ ಮಾಡಬಹುದು. ಸಣ್ಣಪುಟ್ಟ ತಪ್ಪುಗಳಾದರೆ ಅಂಗಾಂಗ ಛೇದನದಂತಹ ಶಿಕ್ಷೆ ವಿಧಿಸಬಹುದು.

ಕೆಳವರ್ಗದವರಲ್ಲೂ ಅತಿಯಾದ ಗೊಡ್ಡು ಸಂಪ್ರದಾಯಗಳಿದ್ದವು. ಭದ್ರಕಾಳಿಯಂತಹ ಕ್ರೂರ ದೇವತೆಗಳನ್ನು ಆರಾಧಿಸುವ ಅವರು ಮೃಗಬಲಿ ಮುಂತಾದ ಕ್ರೂರ ಲೀಲೆಗಳನ್ನಾಡುತ್ತಿದ್ದರು. ವಿವಾಹ, ಮರಣ ಇತ್ಯಾದಿ ಕ್ರಿಯೆಗಳಲ್ಲಿ ಮೂಢನಂಬಿಕೆಗಳು ಮೆರೆದಾಡುತ್ತಿದ್ದವು. ಶುಚಿತ್ವ ಅವರ ಹತ್ತಿರಕ್ಕೆ ಸುಳಿದಿರಲಿಲ್ಲ. ವಿದ್ಯಾಭ್ಯಾಸವಂತೂ ಇರಲೇ ಇಲ್ಲ.

ಸಂಖ್ಯೆಯ ದೃಷ್ಟಿಯಲ್ಲಿ ಎರಡು ಪ್ರಮುಖ ಜಾತಿಗಳು ಕೇರಳದುದ್ದಕ್ಕೂ ತನ್ನ ಬಾಹುಗಳನ್ನು ಚಾಚಿದ್ದವು. ನಾಯರ್ ಮತ್ತು ಈಳವರು. ಅಲ್ಪಸಂಖ್ಯಾತರಾದ ಬ್ರಾಹ್ಮಣರು, ಬಹುಸಂಖ್ಯಾತರಾದ ಶೂದ್ರ ಹಾಗೂ ಅವರ್ಣೀಯರನ್ನು ಆಳುವುದು ಪರಂಪರೆಯಿಂದ ಬಂದ ಬಳುವಳಿ. ಆಗ ನಮ್ಮ ದೇಶವನ್ನು ಆಳುತ್ತಿದ್ದ ಬ್ರಿಟಿಷ್‌ರಿಗೂ ಸಂಸ್ಕೃತ ಬಲ್ಲ ಬ್ರಾಹ್ಮಣರೆಂದರೆ ಅಚ್ಚುಮೆಚ್ಚು.

ಈ ಎಲ್ಲ ಸಾಮಾಜಿಕ ಹಿನ್ನೆಲೆಯನ್ನಿಟ್ಟುಕೊಂಡು ೧೮೫೪ರಲ್ಲಿ ತಿರುವನಂತಪುರದ ಹೊರವಲಯದ ಚೆಂಬಳಾಂದಿ ಎಂಬಲ್ಲಿ ಜನಿಸಿದ ನಾರಾಯಣ ಗುರುಸ್ವಾಮಿಗಳ ಜೀವನವನ್ನು ಅಧ್ಯಯನ ಮಾಡಬೇಕು.

ಅಧ್ಯಾಯ ೨

ಬಾಲ್ಯದ ದಿನಗಳು

ಮಾಡನ್ ಆಶಾನ್ ಹಾಗೂ ಕುಟ್ಟಿಯವರ ಮಗನಾಗಿ ಜನಿಸಿದ ನಾಣು (ನಾರಾಯಣ ಗುರು) ಮಾವ ಕೃಷ್ಣನ್ ವೈದ್ಯರ್‌ರ ಮೇಲ್ವಿಚಾರಣೆಯಲ್ಲಿ ಬಾಲ್ಯವನ್ನು ಕಳೆದರು. ಕೃಷ್ಣನ್ ವೈದ್ಯರ್ ಆಯುರ್ವೇದ ಶಾಸ್ತ್ರ ಬಲ್ಲವೈದ್ಯರಾಗಿದ್ದುದಷ್ಟೇ ಅಲ್ಲದೆ ಸಂಸ್ಕೃತವನ್ನು ಬಲ್ಲ ಪಂಡಿತರೂ ಆಗಿದ್ದರು. ಆ ದಿನಗಳಲ್ಲಿ ಕೃಷ್ಣನ್ ವೈದ್ಯರಂತೆ ಪರಿಷ್ಕಾರ ಪಡೆದುಕೊಂಡ ಈಳವ ಜಾತಿಯವರು ಅಲ್ಲಲ್ಲಿ ಕಾಣಿಸ ತೊಡಗಿದ್ದರು.

ನಾಣು ಚಿಕ್ಕವರಿದ್ದಾಗ ಜಾತಿ ಅವರನ್ನು ಬಹಳವಾಗಿ ಕಾಡುತ್ತಿತ್ತು ಸವರ್ಣೀಯರು ಅವರನ್ನು ಕಂಡಾಗಲೆಲ್ಲ ದೂರದೂರ ಹೋಗುತ್ತಿದ್ದುದು ಅವರಿಗೊಂದು ಸಮಸ್ಯೆಯೇ ಆಗಿತ್ತು. ನಾರಾಯಣ ಗುರುವಿನ ಜೀವನವನ್ನು ಬಹಳ ಹತ್ತಿರದಿಂದ ಕಂಡ ಅವರ ಶಿಷ್ಯರೂ ಆದ ಕುಮಾರನ್ ಆಶಾನ್ ದಾಖಲಿಸಿರುವಂತೆ ನಾಣು ಎಳೆಯವರಿದ್ದಾಗ

ತನಗಿಂತ ಕೆಳಗಿನವರನ್ನು ಮುಟ್ಟುತ್ತಿದ್ದರು. ಅದೂ ನಿಷಿದ್ಧವಾಗಿತ್ತು. ನಾಣು ಅಷ್ಟಕ್ಕೆ ನಿಲ್ಲಿಸುತ್ತಿರಲಿಲ್ಲ. ದೂರ ಓಡಿಹೋಗಲೆತ್ನಿಸುತ್ತಿದ್ದ ಮೇಲ್ಜಾತಿಯವರನ್ನು ಅಟ್ಟಿಸಿಕೊಂಡು ಹೋಗಿ ಮುಟ್ಟುತ್ತಿದ್ದರು. ಅವರ್ಮ 'ಮೈಲಿಗೆ'ಯಾಯಿತೆಂದು ಕಿರಚಿಕೊಳ್ಳುವುದರಲ್ಲಿ ನಾಣು ಮೋಜು ಕಾಣುತ್ತಿದ್ದರು.

ಹಣ್ಣು ಹಂಪಲುಗಳು, ಪರಮಾನ್ನಾದಿ ಸಿಹಿವಸ್ತುಗಳು ದೇವರಿಗೆಂದು ಮೀಸಲಿಟಿದ್ದು ಕಂಡರೆ ನಾಣು ಅದನ್ನೆತ್ತಿ ತಿಂದು ಬಿಡುತ್ತಿದ್ದರು. ''ನಾನು ಸಂತೃಪ್ತನಾದರೆ ದೇವರು ಸಂತೃಪ್ತರಾಗಿಯೇ ಆಗುತ್ತಾರೆ'' ಎಂಬುದು ನಾಣುವಿನ ಬಾಲವಾತು.

ಒಮ್ಮೆ ಸನ್ಯಾಸಿಯೊಬ್ಬ ಕಾಷಾಯಧಾರಿಯಾಗಿ ದಾರಿ ಸಾಗುತ್ತಿದ್ದಾಗ ಆತನ ವೇಷಕಂಡು ಹುಡುಗರೆಲ್ಲ ವಿಪರೀತ ಗೇಲಿಯೆಬ್ಬಿಸುತ್ತಿದ್ದರು. ಅದನ್ನು ಕಂಡ ನಾಣು ಅಸಹಾಯಕನಾಗಿ ಜೋರಾಗಿ ಅತ್ತುಬಿಟ್ಟ. ಸನ್ಯಾಸಿಯ ಮನಸ್ಸನ್ನು ಅರ್ಥೈಸುವುದು ಸಾಧ್ಯವಾದುದಕ್ಕೆ ಅದೊಂದು ನಿದರ್ಶನವಾಗಿತ್ತು. ಕ್ರಮೇಣ ನಾಣುವಿನಲ್ಲೂ ಸನ್ಯಾಸದ ಮನಸ್ಥಿತಿ ಮನೆಮಾಡತೊಡಗಿದ್ದು ನಿಚ್ಚಳವಾಯಿತು. ಆಗಿಂದಾಗ ಗಾಢಚಿಂತನೆಗೊಳಪಟ್ಟವನಂತೆ ತಟಸ್ಥನಾಗಿ ಕುಳಿತುಬಿಡುವುದು, ಕಾಡಿನ ಪರಿಸರದಲ್ಲಿ ಧ್ಯಾನ ಮಗ್ನನಾಗುವುದು- ಮುಂತಾದುವುಗಳು ಕಂಡು ಬರುತ್ತಿದ್ದವು. ತನ್ನ ಸನಿಹದ ಬಂಧುವೊಬ್ಬರು ನಿಧನರಾದಾಗ ಮನೆಮಂದಿಯೆಲ್ಲ ಅತ್ತುಗೋಗರೆದರು. ಮಾರನೆಯದಿನ ಎಲ್ಲರೂ ನಗುನಗುತ್ತ ತಮ್ಮ ವ್ಯವಹಾರಗಳಲ್ಲಿ ಮಗ್ನರಾದಾಗ ನಾಣುವಿಗೆ ಅದು ಅರ್ಥವಾಗಲಿಲ್ಲ. ಕಾಡಿನ ನಡುವೆ ಕಣ್ಣುಮುಚ್ಚಿ ಧ್ಯಾನ ನಿರತರಾದರು. ಮನೆಮಂದಿಯೆಲ್ಲ ಹುಡುಕಾಡಿದರು. ಹೊಲೆಯರವನೊಬ್ಬ ಆತ ಕಾಡಿನಲ್ಲಿರುವುದನ್ನು

ಪತ್ತೆಹಚ್ಚಿದ. ಮನೆಗೆ ಕರೆದುಕೊಂಡು ಬಂದು ಪ್ರಶ್ನಿಸಿದರು. ಮರಣ, ದುಃಖ ಇತ್ಯಾದಿಗಳ ಅರ್ಥವನ್ನು ಕಂಡುಕೊಳ್ಳಲು ಆತ ಯತ್ನಿಸುತ್ತಿದ್ದ. ನಾಣುವಿಗೆ ಆಗ ಕೇವಲ ಆರು ವರ್ಷ ವಯಸ್ಸು.

ನಾಣು ತನ್ನ ಐದನೆಯ ವಯಸ್ಸಿನಲ್ಲಿ ಚೆಂಬಳಾಂದಿ ಮೂತಪಿಳ್ಳೆ ಎಂಬವರಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿದರು. ಕ್ಷಿಪ್ರವಾಗಿ ಸಂಸ್ಕೃತ ಕಾವ್ಯಗಳನ್ನು ಓದುವ ಕಲೆ ಆತನಿಗೆ ಕರಗತವಾಗಿತ್ತು. ಆತನ ಮಾವ ಕೃಷ್ಣನ್ ವೈದ್ಯರ್ ತನ್ನ ಅಳಿಯನ ಮುಂದಿನ ವಿದ್ಯಾಭ್ಯಾಸದ ಕುರಿತು ಚಿಂತಿಸತೊಡಗಿದರು. ಸನಿಹದಲ್ಲೆಲ್ಲೂ ಮುಂದಿನ ವಿದ್ಯಾಭ್ಯಾಸಕ್ಕೆ ಬೇಕಾದ ಶಾಲೆಗಳಿರಲಿಲ್ಲ. ತಾನು ಕಲಿತುದನ್ನು ಉರುಹೊಡೆಯುವುದು, ತಾನೇ ಹೊಸ ಹೊಸ ಗ್ರಂಥಗಳನ್ನು ಓದಿಕೊಳ್ಳುವುದು ಮಾಡುತ್ತಿದ್ದರು. ಜೊತೆಗೆ ದನಗಳನ್ನು ಮೇಯಿಸಲು ಕೊಂಡೊಯ್ಯುವುದು, ಗದ್ದೆ ಉಳುವುದು ಇತ್ಯಾದಿ ಕೆಲಸಗಳನ್ನು ಮಾಡುತ್ತಿದ್ದರು. ತಾನು ಶ್ಲೋಕಾದಿಗಳಲ್ಲಿ ಮಗ್ನನಾದಾಗ ಎತ್ತುಗಳು ತಮಗಿಷ್ಟಬಂದಂತೆ ನೇಗಿಲೆಳೆದು ಸಾಗುತ್ತಿದ್ದವು.

ಮನೆಬಿಟ್ಟು ಹೋಗುವುದು ನಾಣುವಿಗೆ ಸಂಬಂಧಪಟ್ಟಂತೆ ಮಾಮೂಲಿ ವಿಷಯವಾಗಿತ್ತು. ಸ್ನಾನ, ಧ್ಯಾನಗಳಿಗೆ ಮಾತ್ರ ಯಾವ ತಡೆಯೂ ಇರುತ್ತಿರಲಿಲ್ಲ. ಕಾಯಿಕ್ಕರ, ತಿರುವನಂತಪುರ ಮುಂತಾದ ಕಡೆಗಳಲ್ಲಿದ್ದ ತನ್ನ ಬಂಧುಗಳ ಮನೆಯಲ್ಲಿ ಕೆಲದಿನಗಳ ಮಟ್ಟಿಗೆ ತಂಗಿ ಅಲ್ಲಿಂದ ಮುಂದಕ್ಕೆ ಪಯಣಿಸುತ್ತಿದ್ದರು. ನಿಂತಲ್ಲಿ ನಿಲ್ಲುವ ಜಾಯಮಾನ ಅವರದಾಗಿರಲಿಲ್ಲ.

ಒಮ್ಮೆ ನಾಣು ಸಿಡುಬು ರೋಗಕ್ಕೆ ಒಳಗಾಗಿದ್ದಾಗ ಹದಿನೆಂಟು ದಿನಗಳಕಾಲ ಪಾಳುಬಿದ್ದ ಭಗವತೀ ಕ್ಷೇತ್ರವೊಂದರಲ್ಲಿ ತಂಗಿದ್ದರು. ನಡುವೆ ಒಂದೆರಡು ಬಾರಿ ಕತ್ತಲಲ್ಲಿ ಪರಿಚಿತರ ಮನೆಗೆ ಹೋಗಿ ಆಹಾರ

ಸ್ವೀಕರಿಸಿದ್ದರು. ಮನೆಬಿಟ್ಟು ಹೋಗುವುದು ಆತನ ಮನೆಯವರಿಗೂ ಹೊಸ ವಿಚಾರವಾಗಿರಲಿಲ್ಲ. ಆದರೆ ಸಿಡುಬಿನ ಕಲೆಯೊಂದಿಗೆ ಹಿಂದಿರುಗಿದಾಗ ಸ್ವತಃ ವೈದ್ಯಯರಾಗಿದ್ದ ಆತನ ಮಾವ ಕೃಷ್ಣನ್ ವೈದ್ಯರ್ ಸಮೇತ ಎಲ್ಲರಿಗೂ ಅಚ್ಚರಿ.

೧೮೭೭ ರಲ್ಲಿ ತಿರುವಾಂಕುರಿನ ಪ್ರಸಿದ್ಧ ಗುರುಗಳಾದ ಕುಮ್ಮಪ್ಪಳ್ಳಿ ರಾಮನ್‌ಪಿಳ್ಳೆ ಆಶಾನ್‌ರ ಬಳಿ ವಿದ್ಯಾಭ್ಯಾಸ ಮುಂದುವರಿಸುವ ಅವಕಾಶ ನಾಣುವಿಗೆ ಲಭಿಸಿತು. ಕೃಷ್ಣನ್ ವೈದ್ಯರ್ ತನ್ನ ಅಳಿಯನನ್ನು ಗುರುಗಳ ಬಳಿ ಕಳುಹಿಸುವಾಗ ಖರ್ಚಿಗೆಂದು ತಾನು ಕೂಡಿಟ್ಟ ಹಣವನ್ನು ತೆಗೆದುಕೊಟ್ಟರು. ನಾಣು ಅದನ್ನು ನಿರಾಕರಿಸಿದರು. ಇತರರು 'ಹಾಗೇಕೆ ಮಾಡಿದೆ?' ಎಂದು ಪ್ರಶ್ನಿಸಿದಾಗ ನಾಣು 'ಒಂದೇ ಹೊತ್ತಿಗೆ ಎರಡು ನೋವುಗಳನ್ನೀಯುವುದು ಯುಕ್ತವಲ್ಲ' ಎಂದರು. ಅನ್ಯರ ಮನಸ್ಸಿನ ಒಳಪ್ರವೇಶಿಸುವ ವಿಶೇಷ ಗುಣ ಅವರಿಗೆ ಆದಾಗಲೇ ಸಿದ್ಧಿಸಿತ್ತು ಎಂಬುದಕ್ಕೆ ಇದೊಂದು ನಿದರ್ಶನ.

ಕುಮ್ಮಪ್ಪಳ್ಳಿ ರಾಮನ್ ಪಿಳ್ಳೆ ಆಶಾನ್‌ರವರ ಶಿಷ್ಯನಾಗಿ ನಾಣು, ವಿಶೇಷ ಪ್ರಗತಿ ಸಾಧಿಸಿದರು, ಹಿರಿಯ ವಿದ್ಯಾರ್ಥಿಗಳ ಮುಖಾಂತರ ಪಾಠವನ್ನು ಕಲಿಯುವ ಅವಕಾಶವನ್ನು ಪಡೆದರು. ವಿದ್ಯಾರ್ಥಿಗಳ ಮುಖಂಡರಾಗಿ ಆಯ್ಕೆಯಾದರು. ಮಾತ್ರವಲ್ಲದೆ ಕಿರಿಯ ವಿದ್ಯಾರ್ಥಿಗಳಿಗೆ ಪಾಠಹೇಳುವ ಜವಾಬ್ದಾರಿಯನ್ನು ಗಳಿಸಿದರು. ಕಠಿಣಸಾಧ್ಯವಾದ ವೇದಾಂತ ಪಠಣದ ಅವಕಾಶ ಬಹುಕ್ಷಿಪ್ರವಾಗಿ ಅವರಿಗೆ ಒದಗಿಬಂತು. ಆದಾಗಲೇ ಕಾವ್ಯ ರಚನೆಯಲ್ಲೂ ಅವರು ತೊಡಗಿದ್ದರು. ಇನ್ನಷ್ಟುಕಾಲ ವಿದ್ಯಾಭ್ಯಾಸ ಮುಂದುವರಿಸುವುದಕ್ಕೆ ಅವರನ್ನು ಬಾಧಿಸಿದ ಅತಿಸಾರ ಕಾಯಿಲೆ ಅವಕಾಶಕೊಡಲಿಲ್ಲ. ಮೂರು ವರ್ಷಗಳಲ್ಲಿ ಆ ವಿದ್ಯಾಭ್ಯಾಸ ಕೊನೆಗೊಂಡಿತು.

ಆಶಾನ್ ಆಗಿ ನಾಣು: ಊರಿನ ಸನಿಹದ ಕಡಕ್ಕಾವೂರ್ ಎಂಬಲ್ಲಿ ನಾಣು ಶಾಲೆಯೊಂದನ್ನು ತೆರೆದು ಮಕ್ಕಳಿಗೆ ಪಾಠ ಹೇಳತೊಡಗಿದರು. ಮುಂದೆ 'ಅಂಜು-ತೆಂಗು' ಎಂಬಲ್ಲಿಯೂ ಶಾಲೆತೆರೆದು ನಾಣು, ನಿಜವಾದ ಅರ್ಥದಲ್ಲಿ ಆಶಾನ್ (ಅಧ್ಯಾಪಕ) ಆದರು. ಧಾರ್ಮಿಕ ಗ್ರಂಥಗಳ ಪಠಣ ವ್ಯಾಖ್ಯಾನ ಇತ್ಯಾದಿಗಳಿಗೆ ವಿಶೇಷ ಮಹತ್ವ ನೀಡಿದರು. ವ್ಯಾಸ, ವಾಲ್ಮೀಕಿ, ಶಂಕರ, ತಿರುವಳ್ಳುವರ್ ನೀಡಿದ ಆಧ್ಯಾತ್ಮಿಕ ಒಳತೋಟಗಳನ್ನು ಅರ್ಥೈಸುವ ಪ್ರಯತ್ನದಲ್ಲಿ ವಿದ್ಯಾರ್ಥಿಗಳನ್ನವರು ತೊಡಗಿಸಿದರು.

ನಾಣು ವಿವಾಹಿತನಾದ ಬಗ್ಗೆ ವಿವಿಧ ಹೇಳಿಕೆಗಳಿವೆ. ಅವರನ್ನು ಸಂಸಾರದಲ್ಲಿ ತೊಡಗಿಸುವುದಕ್ಕಾಗಿ ಕನ್ಯೆಯನ್ನು ಕರೆತಂದು ಅವರ ಅನುಪಸ್ಥಿತಿಯಲ್ಲಿ ವಿವಾಹ ನೆರವೇರಿಸಲಾಯಿತೆಂಬ ಹೇಳಿಕೆಯೂ ಇದೆ. ಆಕೆಯ ಜೊತೆ ವೈವಾಹಿಕ ಸಂಬಂಧಗಳಿದ್ದುದಾಗಿ ತಿಳಿದುಬರುವದಿಲ್ಲ. ಮನೆಮಂದಿಯ ಒತ್ತಾಯಕ್ಕಾಗಿ ಅವರು ಒಮ್ಮೆ ಪತ್ನಿಯ ಮನೆಗೆಹೋಗಿ ಆಕೆಯೊಂದಿಗೆ ಹೇಳಿದರೆನ್ನಲಾದ ಮಾತು ಬಹಳ ಮಹತ್ವದ್ದೆನ್ನಿಸಿದೆ. "ನಾವೆಲ್ಲರೂ ಕೆಲವು ಉದ್ದೇಶಕ್ಕಾಗಿ ಇಲ್ಲಿ ಹುಟ್ಟಿದ್ದೇವೆ. ನನಗೆ ನನ್ನ ಕೆಲಸಗಳಿವೆ, ನಿಮಗೆ ನಿಮ್ಮದು. ನಾನು ನನ್ನ ದಾರಿಯಲ್ಲಿ ಚಲಿಸುವೆ, ನೀವು ನಿಮ್ಮ ದಾರಿಯಲ್ಲಿ ಚಲಿಸಿರಿ".

ಒಬ್ಬರನ್ನೊಬ್ಬರು ಅವಲಂಬಿಸಿಕೊಂಡು ಬದುಕುವುದರಲ್ಲಿ ಯಾವ ಅರ್ಥವೂ ಇಲ್ಲ. ಬದುಕು ಸ್ವತಂತ್ರವಾಗಿರಬೇಕು ಎಂಬ ಮಾತನ್ನು ಜಗತ್ತಿಗೆ ಸಾರುವ ಉದ್ದೇಶ ಈ ಮಾತುಗಳಲ್ಲಿವೆ. ನಟರಾಜಗುರು ಅವರು ಬರೆದ 'ದ ವರ್ಡ್ ಆಫ್ ದ ಗುರು' ಎಂಬ ಪ್ರಸಿದ್ಧ ಹೊತ್ತಿಗೆಯಲ್ಲಿ ನಾಣುಸ್ವಾಮಿಯ ಅನ್ವೇಷಕ ದೃಷ್ಟಿಯ ಕುರಿತು ಹೀಗೆ ಹೇಳಲಾಗಿದೆ. ತನ್ನ ಮನೆಯನ್ನು ಹಿಂದೆಬಿಟ್ಟು ವರ್ಷಾನುಗಟ್ಟಲೆ

ಅಂಡಲೆಯುವ ಕಾಲಘಟ್ಟದಲ್ಲಿ ಕೆಲವೊಮ್ಮೆ ಮುನ್ನೂರು ನಾನೂರು ಮೈಲಿಗಳಷ್ಟು ನಿರಂತರ ನಡೆದದ್ದಿದೆ. ನದಿಗಳನ್ನು, ಹಿನ್ನೀರನ್ನು ಈಜಿ ದಾಟಿದ್ದಿದೆ ಅದೊಂದೂ ಅವರಲ್ಲಿ ಸುಪ್ತವಾಗಿದ್ದ ಅನ್ವೇಷಕ ದೃಷ್ಟಿಯನ್ನು ತಣಿಸಲಿಲ್ಲ.

ಹಸಿವು ನೀರಡಿಕೆಗಳನ್ನು ಲೆಕ್ಕಿಸದೇ ಅವರು ರಾಜ್ಯದುದ್ದಕ್ಕೂ ಸಂಚರಿಸಿದರು. ಕೆಲವೊಮ್ಮೆ ಜನರ ನಡುವೆ ಇನ್ನು ಕೆಲವೊಮ್ಮೆ ಗುಡ್ಡ ಬೆಟ್ಟ ಕಾಡು-ಮೇಡುಗಳಲ್ಲಿ ಕಾಣಿಸಿಕೊಂಡರು ದೇಗುಲಗಳನ್ನು ಸಂದರ್ಶಿಸುವುದು ಅವರಿಗೆ ಪ್ರಿಯವಾದ ಕೆಲಸ. ಕೆಲವೊಮ್ಮೆ ದೇಗುಲದ ಯಾವುದೊ ಮೂಲೆಯಲ್ಲಿ ಮೈಮರೆತು ಧ್ಯಾನನಿರತರಾಗುತ್ತಿದ್ದರು.

ಏ.ಕೆ.ಕೃಷ್ಣನ್ ವೈದ್ಯರ್ ಎಂಬ ಆತ್ಮೀಯರೊಬ್ಬರ ಬಳಿಗೆ ನಾಣುಸ್ವಾಮಿ ಆಗಿಂದಾಗ ಹೋಗುತ್ತಿದ್ದರು. ಅವರಲ್ಲಿ ಸಂಸ್ಕೃತ ಹಾಗೂ ತಮಿಳಿನ ಧಾರ್ಮಿಕ ಗ್ರಂಥಗಳ ಅಪಾರ ಸಂಗ್ರಹಿಸಿದ್ದುದು ನಾರಾಯಣ ಸ್ವಾಮಿಯ ಆಕರ್ಷಣೆಗೆ ಪ್ರಮುಖ ಕಾರಣವಾಗಿತ್ತು.

ತೈಕಾಟ್ಟ್ ಅಯ್ಯಾವ್ ಎಂಬ ಪ್ರಸಿದ್ಧ ಯೋಗ ವಿದ್ಯಾಪರಿಣತರಲ್ಲಿ ಯೋಗಾಭ್ಯಾಸ ಮಾಡಿದರು. ಎಳವೆಯಿಂದ ಮೈಗೂಡಿಸಿಕೊಂಡಿದ್ದ ಸೊಪ್ಪುಗಳನ್ನು ಜಗಿದು ರಸಹೀರುವ ಪ್ರವೃತ್ತಿ ಮುಂದೆ ಅವರಿಗೆ ಪ್ರಯೋಜನಕ್ಕೆ ಬಂತು. ದೇವಾಲಯಗಳಲ್ಲಿ ಗುಹೆಗಳಲ್ಲಿ, ಏಕಾಂತದಲ್ಲಿ, ಧ್ಯಾನ ಯೋಗಾದಿಗಳಲ್ಲಿ ನಿರತರಾದಾಗ ಈ ತೆರನಾದ ಸೊಪ್ಪು-ಸೊದೆಗಳು, ಕಾಡ ಹಣ್ಣುಗಳು 'ಅವರ ಬಹುಮೂಲ್ಯ ಆಹಾರವಾಗಿರುತ್ತಿದ್ದವು. ಅವರ ಒಂಟಿ ಜೀವನವನ್ನು ಕಂಡ ಕೆಲವು ಸಂದರ್ಶಕರು, "ರಾತ್ರಿಯಿಡೀ ಗುಹೆಗಳಲ್ಲಿ ಕಾಲ ಕಳೆಯುವುದಕ್ಕೆ ನಿಮಗೆ ಭಯವಾಗುವುದಿಲ್ಲವೇ?" ಎಂದು ಪ್ರಶ್ನಿಸಿದರು, ಅದಕ್ಕವರು "ಇಲ್ಲ ನಾವಲ್ಲದೇ ಬೇರೆಯೂ ಕೆಲವೆಲ್ಲ

ವಿಚಾರಗಳು ಲೋಕದಲ್ಲಿ ಇವೆ. ಎಂದು ತಿಳಿದಾಗ ಮಾತ್ರ ಹೆದರಿಕೆ ಉಂಟಾಗುತ್ತದೆ. 'ಎಲ್ಲವೂ ನಾವೆ' ಎಂದು ತಿಳಿದರೆ ಅಲ್ಲಿ ಹೆದರಿಕೆಗೇನು ಕೆಲಸ?'' ಎಂದರು. ಜನರಲ್ಲಿ ಮನೆಮಾಡಿರುವ ಭೀತಿಯನ್ನು ತೊಡೆದು ಹಾಕಲು ನಾಣುಸ್ವಾಮಿ ಹೇಳಿಕೊಟ್ಟ ಸೂತ್ರವಿದು.

ಕೊನೆಗೊಮ್ಮೆ ಕನ್ಯಾಕುಮಾರಿಯ ಸನಿಹದ ಮರತಮಲೈ ಎಂಬಲ್ಲಿನ ಗುಹೆಯೊಂದರಲ್ಲಿ ನಾಣುಸ್ವಾಮಿ ದೀರ್ಘಕಾಲ ಧ್ಯಾನ ನಿರತರಾದರು. ಅಲ್ಲೇ ಅವರಿಗೆ ಜ್ಞಾನೋದಯವಾಯಿತು ಎನ್ನಲಾಗಿದೆ. ಮೊದಮೊದಲಲ್ಲಿ ಶ್ರೀ ಕೃಷ್ಣನ ಆರಾಧಕರಾಗಿದ್ದ ಅವರು ಮುಂದೆ ಎಲ್ಲ ದೇವರನ್ನೂ ಏಕ ಸಮಾನವಾಗಿ ಪೂಜಿಸತೊಡಗಿದರು. ಕ್ರೈಸ್ತರು, ಮುಸಲ್ಮಾನರು ಇತರ ಎಲ್ಲ ಜಾತಿಯವರು ನಾರಾಯಣಸ್ವಾಮಿಯ ಸಂಪರ್ಕಕ್ಕೆ ಬಂದರು. ಖುರಾನಿನ ಬಗೆಗೆ ಅವರು ನೀಡುತ್ತಿದ್ದ ವ್ಯಾಖ್ಯಾನವನ್ನು ತಿರುವಾಂಕೂರಿನ ಪ್ರಸಿದ್ಧ ಮುಸಲ್ಮಾನ್ ವಿದ್ವಾಂಸರು ಮೆಚ್ಚಿ ಹುಬ್ಬೇರಿಸುತ್ತಿದ್ದರು. ಅರವಿಪುರಂನಲ್ಲಿ ನಾಣುಸ್ವಾಮಿ ಸ್ಥಾಪಿಸಿದ ದೇವಾಲಯದಲ್ಲಿ ಕ್ರೈಸ್ತರ ಕೊಡುಗೆಯೂ ಗಣನೀಯವಾದುದು.

ಅಧ್ಯಾಯ ೩

ಕ್ರಾಂತಿಯ ಕ್ಷಣಗಳು

ರಾಮೇಶ್ವರದಿಂದ ಕೈಲಾಸದವರೆಗೆ ಸಾವಿರಾರು ಶಿವದೇವಾಲಯಗಳು ನೆಲೆಗೊಂಡಿವೆ. ಶಿವಲಿಂಗವನ್ನೇ ಹೆಚ್ಚಿನ ದೇವಾಲಯಗಳಲ್ಲೂ ಪ್ರತಿಷ್ಠಾಪಿಸಲಾಗಿದೆ. ನಾರಾಯಣಸ್ವಾಮಿ ನೆಯ್ಯೂರ್ ನದಿಯಿಂದ ಹೆಕ್ಕಿ ತೆಗೆದ ಒಂದು ಕಲ್ಲನ್ನು ಅರವಿಪುರಂನಲ್ಲಿ ನಿರ್ಮಿಸಿದ ದೇವಾಲಯದಲ್ಲಿ ಪ್ರತಿಷ್ಠಾಪಿಸಿದರು. ಈಳವ ಭಕ್ತಾದಿಗಳು ಗರ್ಭಗುಡಿ ನಿರ್ಮಿಸಿದರು. ಬ್ರಾಹ್ಮಣನಲ್ಲದೆ ಅನ್ಯನೊಬ್ಬ ಪ್ರತಿಷ್ಠಾಕರ್ಮ ನೆರವೇರಿಸಿದ ಹೇಳಿಕೆಗಳಿಲ್ಲ. ರಾಮೇಶ್ವರದಲ್ಲಿ ಶ್ರೀರಾಮನೇ ಶಿವಲಿಂಗವನ್ನು ಪ್ರತಿಷ್ಠಾಪನೆ ಮಾಡಿದನೆನ್ನಲಾಗಿದ್ದರೂ ಆ ಕಾಲದಲ್ಲಿ ಜಾತಿಪದ್ಧತಿಯು ಆಧುನಿಕ ಯುಗದಷ್ಟು ಕಟ್ಟುನಿಟ್ಟಾಗಿರಲಿಲ್ಲ. ಈ ದೃಷ್ಟಿಯಿಂದ ಗಮನಿಸಿದಾಗ ಸ್ಮೃತಿಯಲ್ಲಿ ಹೇಳದ ಶಾಸ್ತ್ರದಲ್ಲಿ ನಮೂದಿಸದ ಕ್ರಾಂತಿಕಾರಕ ಕೆಲಸವನ್ನು ಸಮಾಜದ

ನಿಕೃಷ್ಟಸ್ತರದಲ್ಲಿ ಜನಿಸಿದವರಾದ ನಾಣುಸ್ವಾಮಿ ಮಾಡಿ ತೋರಿಸಿದರು. ಅರವಿಪುರಂನಲ್ಲಿ ದೇವಾಲಯ ರೂಪುಗೊಂಡದು ಹೀಗೆ.

ಇನ್ನೂ ಒಂದು ಕಾರಣಕ್ಕೆ ನಾರಾಯಣಸ್ವಾಮಿ ಮಾಡಿದ ಕೆಲಸ ಕ್ರಾಂತಿಕಾರಕವಾಗಿತ್ತು. ಈಳವ ಸಮುದಾಯ ಅಂದು ನಂಬಿಕೊಂಡು ಬಂದ ಪ್ರಾಕೃತ ದೇವತೆಗಳಾದ ಚಾಮುಂಡಿ, ಒಟ್ಟೆಮೊಲಚ್ಚಿ, ಭಗವತಿ ಮುಂತಾದವರು ಸೇಂದಿ, ಸಾರಾಯಿ, ಪ್ರಾಣಿಬಲಿ ಮುಂತಾದುವುಗಳಿಂದ ಸಂತೃಪ್ತಿ ಕಾಣುತ್ತಿದ್ದರು. ಅಂತಹ ಸಮುದಾಯದಿಂದ ಮೇಲೆದ್ದು ಬಂದ ನಾಣುಸ್ವಾಮಿ ಸಾತ್ವಿಕ ಗುಣ ಪ್ರತಿಪಾದಕರಾಗಿ, ಶಿವಲಿಂಗ ಪ್ರತಿಷ್ಠಾಪನೆ ಮಾಡಿ ಈಳವ ಸಮುದಾಯದ ಕಣ್ಣು ತೆರೆಸಿದರು. ಆ ಮೂಲಕ ಸರ್ವ ಸಮುದಾಯಗಳನ್ನು ಒಂದೇ ನೆರಳಿನ ಅಡಿಗೆ ತರುವ ಪ್ರಯತ್ನ ಮಾಡಿದರು.

ಅರವಿಪುರಂನಲ್ಲಿ ನಿರ್ಮಿಸಲಾದ ಈ ಶಿವದೇವಾಲಯದ ಬಗ್ಗೆ ನಾಣುಸ್ವಾಮಿ ಬರೆದು ಕೊರೆಯಿಸಿದ ಸಾಲುಗಳು ಸೋದರತ್ವದ ಸಂಕೇತವಾಗಿದೆ.

ಜಾತಿ ಭೇದ ಮತ ದ್ವೇಷ,
ಎಳ್ಳನಿತಿಲ್ಲದೆ ಸಕಲರೂ
ಸಹೋದರತ್ವದಿ ಬಾಳುತ್ತಿರುವ
ಮಾತೃಕೆಯಂತಿಹ ತಾಣವಿದು.

ತನ್ನ ಮುಂದಿರುವ ಘನವಾದ ಉದ್ದೇಶವನ್ನು ಸಾರುವ ಈ ಸಾಲುಗಳು ನಾಣುಸ್ವಾಮಿಯ ದೂರಾಲೋಚನೆಯನ್ನು ಸಾರುತ್ತವೆ.

ಅಂದು ಅರವಿಪುರಂನಲ್ಲಿ ನಾಣುಸ್ವಾಮಿ ನಿರ್ಮಿಸಿದ ದೇಗುಲ ಇಂದಿಗೂ ಬದಲಾವಣೆಯ ಸಂಕೇತವಾಗಿ ಪ್ರಸಿದ್ಧಿ ಪಡೆದು ನಿಂತಿದೆ ಒಂದೇ ಜಾತಿ, ಒಂದೇ ಮತ, ಒಂದೇ ದೇವರು ಮನುಷ್ಯನಿಗೆ - ಎಂಬ

್ಯೇಯವಾಕ್ಯ ಟಿಸಿಲೊಡೆದು ಜಗತ್ತನ್ನು ವ್ಯಾಪಿಸಲು ಕಾರಣವಾದ ಮೂಲತಾಣವಿದು.

ಜನಾಕರ್ಷಣೆಯ ಕೇಂದ್ರ:

೧೮೮೮ ರಿಂದ ೧೯೦೪ ತನಕ ನಾಣುಸ್ವಾಮಿ ಅರವಿಪುರಂವನ್ನು ನ್ನ ಪ್ರಮುಖ ತಾಣವನ್ನಾಗಿಸಿಕೊಂಡರು. ಭಕ್ತಾದಿಗಳು ಅನೇಕ ಂಖ್ಯೆಯಲ್ಲಿ ದೇವಾಲಯಕ್ಕೆ ಬರುತ್ತಿದ್ದರು. ನಾಣುಸ್ವಾಮಿಯನ್ನು ೇಟಿಯಾದಾಗ ಅವರು ಭಕ್ತಾದಿಗಳ ಸುಖ ದುಃಖ ವಿಚಾರಿಸುತ್ತಿದ್ದರು. ್ವಾಮಿಗೆಂದು ಹಣ್ಣು ಹಂಪಲಗಳು ಕಾಣಿಕೆಗಳನ್ನು ತರುತ್ತಿದ್ದರು. ನಡುವೆ ಾ. ಪಲ್ಪು ಎಂಬವರೊಬ್ಬರು ತಿರುವನಂತಪುರಕ್ಕೆ ಬಂದವರು ಈ ಾಣುವಸ್ವಾಮಿಯ ವಿವರ ತಿಳಿದು ಅವರನ್ನು ಭೇಟಿ ಮಾಡಿದರು. ಾಣುವಸ್ವಾಮಿಯಿಂದ ಅವರು ಎಷ್ಟರಮಟ್ಟಿಗೆ ಪ್ರಭಾವಿತರಾದರೆಂದರೆ ತಮ್ಮ ಮುಂದಿನ ಜೀವನವನ್ನು ನಾಣುಸ್ವಾಮಿಯ ಧ್ಯೇಯಗಳನ್ನು ಅನುಷ್ಠಾನಕ್ಕೆ ತರುವ ದೆಸೆಯಲ್ಲಿ ದುಡಿಯುವುದಕ್ಕಾಗಿ ಮೀಸಲಿರಿಸಿದರು.

ನಾಣುಸ್ವಾಮಿಯಾದರೊ ಜಾತೀಯತೆ ಹಾಗೂ ಅಸ್ಪೃಶ್ಯತೆಗಳನ್ನು ಮೂಲೋತ್ಪಾಟನ ಮಾಡುವ ಸವಾಲನ್ನು ಸ್ವೀಕರಿಸಿದವರು. ಡಾ. ಪಲ್ಪು ಅವರನ್ನು ಸರಿಯಾಗಿ ಅರ್ಥೈಸಿಕೊಂಡು, ನಾಣುಸ್ವಾಮಿಯ ಇನ್ನೋರ್ವ ಶಿಷ್ಯ ಕುಮಾರನ್ ಆಶಾನ್ ಜೊತೆ ಸೇರಿಕೊಂಡು ಮುಂದಿನ ಮಹತ್ತರ ಯೋಜನೆಗಳ ಬಗ್ಗೆ ಯೋಚಿಸತೊಡಗಿದರು.

ಪರಿಣಾಮದಲ್ಲಿ ನಾಣುಸ್ವಾಮಿ ಆಶೀರ್ವಾದದೊಂದಿಗೆ ೀನಾರಾಯಣ ಧರ್ಮ ಪರಿಪಾಲನ ಯೋಗಂ (ಎಸ್.ಎನ್.ಡಿ.ಪಿ) ಎಬ ಸಂಸ್ಥೆಯನ್ನು ೧೯೦೩ರಲ್ಲಿ ಸ್ಥಾಪಿಸಲಾಯಿತು. ನ್ಯಾಯ ಹಾಗೂ ಸಮಾನತೆಗಳನ್ನು ಎಸ್.ಎನ್.ಡಿ.ಪಿ. ಅಂದಿನ ಸರಕಾರದ ಮೂಲಕ

ಪಡೆಯುವುದಕ್ಕೆ ಪ್ರಯತ್ನಿಸಿತು. ಕೇರಳ ಹಾಗೂ ಅಂದಿನ ಮದ್ರಾಸ್ ಸಂಸ್ಥಾನಗಳಲ್ಲಿ ಎಸ್.ಎನ್.ಡಿ.ಪಿ.ಯ. ಕರೆಯು ವಿಶೇಷ ಪರಿಣಾಮ ಬೀರಿತು.

ಡಾ. ಪಲ್ಪು ಹಾಗೂ ಕುಮಾರನ್ ಆಶಾನ್ ಎಂಬ ಇಬ್ಬರು ನಾಯಕರು ಎಸ್.ಎನ್.ಡಿ.ಪಿ.ಯನ್ನು ಬಲಿಷ್ಠವಾಗಿ ಕಟ್ಟಿ ಬೆಳೆಸತೊಡಗಿದರು. ಅದರ ಸಂವಿಧಾನವನ್ನು ನಾರಾಯಣಗುರುವಿಗೆ ಓದಿ ಹೇಳಿದಾಗ ಅದರಲ್ಲಿದ್ದ 'ಸಮುದಾಯ' ಪದವನ್ನವರು ವಿರೋಧಿಸಿದರು. ಸಮುದಾಯವೆಂದರೆ ಕೇವಲ ಈಳವ, ತೀಯ, ಬಿಲ್ಲವ, ನಾಡಾರ್, ಎಂಬ ಒಂದೆ ಸಮುದಾಯದ ಕವಲುಗಳಿಗೆ ಸಂಬಂಧ ಪಡುತ್ತದೆಯೇ ಹೊರತು ವಿಶಾಲ ಅರ್ಥವನ್ನದು ಬಿಂಬಿಸುವುದಿಲ್ಲ ಎಂಬುದನ್ನು ಉಳಿದವರಿಗೆ ಮನವರಿಕೆ ಮಾಡಿಕೊಟ್ಟು 'ಮಾನವ ಕುಟುಂಬ'ವೆಂಬ ಅರ್ಥ ಬರುವಂತೆ ತಿದ್ದಲು ಹೇಳಿದರು. ಆದರೆ ಎಸ್.ಎನ್.ಡಿ.ಪಿ.ಯ ನಾಯಕರಿಗೆ ಈ ಉದಾರ ಧ್ಯೇಯ ಹಿಡಿಸಲಿಲ್ಲ. ಮುಂದೆಂದಾದರೂ ತನ್ನ ಧ್ಯೇಯವನ್ನು ಒಪ್ಪಿಕೊಳ್ಳಬಹುದೆಂದು ಭಾವಿಸಿ ಅವರು ಎಸ್.ಎನ್.ಡಿ.ಪಿಯನ್ನು ಹರಸಿದರು. ಆದರೆ ಅವರು ಮಾತ್ರ 'ಒಂದು ಜಾತಿಯಷ್ಟೇ ಈ ಸಮುದಾಯಕ್ಕಿದೆ ಅದುವೇ ಮಾನವಜಾತಿ' ಎಂಬುದಾಗಿ ಬಲವಾಗಿ ನಂಬಿದ್ದರು. ಅವರ ಈ ನಂಬಿಕೆಯಲ್ಲಿ ಯಾವ ಬದಲಾವಣೆಯೂ ಇರಲಿಲ್ಲ.

ಪರಿವ್ರಾಜಕರೆನಿಸಿಕೊಂಡ ನಾರಾಯಣಗುರು ನಿಂತಲ್ಲಿ ನಿಲ್ಲುವವರಾಗಿರಲಿಲ್ಲ. ರಸ್ತೆಗಳಿಲ್ಲದ ಅಂದಿನ ದಿನಗಳಲ್ಲಿ ಕೇರಳದ ಹಾಗೂ ಮದ್ರಾಸಿನ ಹಳ್ಳಿ ಹಳ್ಳಿಗಳನ್ನು ಅವರು ಸುತ್ತಿದ್ದರು. ಲಕ್ಷಾನುಗಟ್ಟಲೆ ಜನರ ನೇರ ಸಂಪರ್ಕ ಅವರಿಗೆ ಸಾಧ್ಯವಾಗಿತ್ತು. ಜನರಿಗೆ

ದೈಹಿಕ ಹಾಗೂ ಮಾನಸಿಕ ಸ್ವಚ್ಛತೆಯ ಪ್ರಾಮುಖ್ಯವನ್ನು ಪರಿಪರಿಯಾಗಿ ತಿಳಿಯಹೇಳಿದ ಸ್ವಾಮಿಯವರಿಗೆ ವೈದ್ಯಶಾಸ್ತ್ರದಲ್ಲಿ ವಿಶೇಷ ಅನುಭವವೂ ಇತ್ತು. ಅನಾರೋಗ್ಯ ಪೀಡಿತರಾದವರನ್ನು ಅತಿಸರಳ ಔಷಧಗಳಿಂದ ಗುಣಪಡಿಸುತ್ತಿದ್ದರು. ಹೀಗಾಗಿ ಅವರು ಪವಾಡ ಪುರುಷರಾಗಿಯೂ ಕಾಣಿಸಿಕೊಂಡು ಜನಾಕರ್ಷಣೆಯ ಪ್ರಮುಖ ಕೇಂದ್ರವೆನಿಸಿದರು.

ಅಧ್ಯಾಯ ೪

ನಾರಾಯಣ ಗುರು ಚಿಂತನೆಯ ನೆಲೆಗಳು

ಅಷ್ಟು ಕಾಲ ಪ್ರಮುಖ ತಾಣವಾಗಿಸಿಕೊಂಡಿದ್ದ ಅರವಿಪುರಂವನ್ನು ಬಿಟ್ಟು ೧೯೦೭ರಲ್ಲಿ ನಾರಾಯಣ ಗುರು ವರ್ಕಲ ಎಂಬಲ್ಲಿಗೆ ಬಂದರು. ಶಿವಗಿರಿಯಲ್ಲಿ ವಿದ್ಯಾಧಿದೇವತೆಯಾದ ಶಾರದಾಮಾತೆಯ ದೇಗುಲವನ್ನು ನಿರ್ಮಿಸಿದರು. ಪೆರುಂಗೋಟ್ಟುಕರ, ತ್ರಿಚೂರು, ಕಣ್ಣಾನೂರು, ತಲಚೇರಿ ಕಲ್ಲಿಕೋಟೆ ಮಂಗಳೂರು ಮುಂತಾದ ಕಡೆಗಳಲ್ಲಿ ಸುಮಾರು ಮೂವತ್ತು ದೇವಾಲಯಗಳನ್ನು ನಾರಾಯಣ ಗುರು ನಿರ್ಮಿಸಿದ್ದಾರೆ. ದೇವಾಲಯಗಳನ್ನು ನಿರ್ಮಿಸುವುದರಲ್ಲಿ ಗುರುಗಳು ಸಂತೃಪ್ತಿ ಕಾಣುತ್ತಿದ್ದರಾದರೂ, ಬೃಹತ್ ದೇವಾಲಯಗಳನ್ನು ಅವರು ಬಯಸುತ್ತಿರಲಿಲ್ಲ. ದೇವಾಲಯ ಚಿಕ್ಕದಾಗಿದ್ದು ಪ್ರಕೃತಿಯ ಮಡಿಲಲ್ಲಿ ನೆಲೆಗೊಂಡಿರಬೇಕೆಂದು ಅವರ ಅಭಿಪ್ರಾಯವಾಗಿತ್ತು.

ಈಳವ ಸಮುದಾಯದವರಲ್ಲದೇ ಇತರ ಅನೇಕರು ಗುರುಗಳ ಕೆಳಗೆ ಶಿಷ್ಯತ್ವವನ್ನೂ ಸನ್ಯಾಸವನ್ನೂ ಸ್ವೀಕರಿಸಿದ್ದಾರೆ. ಅಂಥವರಲ್ಲಿ

ನಾಯರ್ ಸಮುದಾಯಕ್ಕೆ ಸೇರಿದ ಶಿವಲಿಂಗ ಸ್ವಾಮಿಗಳು ಮೊದಲಿಗರು. ಇಂಗ್ಲೆಂಡಿನ ಅರ್ನೆಸ್ಟ್ ಕಿರ್ಕ್‌ಎಂಬವರಿಗೆ ಸನ್ಯಾಸ ದೀಕ್ಷೆ ಇತ್ತಾಗ ಅವರು ಧರಿಸಿದ್ದ ಉಡುಪು ತೊಡುಪುಗಳನ್ನಾಗಲೀ ಹೆಸರನ್ನಾಗಲೀ ಬದಲಾಯಿಸಬೇಕಾದ ಅಗತ್ಯವಿಲ್ಲವೆಂದು ನಾರಾಯಣ ಗುರು. ಹೇಳಿರುವುದು ಅವರ ಉದಾರವಾದೀ ಧೋರಣೆಯನ್ನು ನಿರ್ದೇಶಿಸುತ್ತದೆ. ಸನ್ಯಾಸಿಗಳಾದವರು ಯಾವುದೇ ಜಾತಿಯನ್ನು ಪ್ರತಿನಿಧಿಸುವವರಾಗಿರಕೂಡದು ಎಂಬ ಅವರ ನಿಲುವು ಈ ಧೋರಣೆಯನ್ನೇ ಸಮರ್ಥಿಸುತ್ತದೆ.

ಸಮಾಜದ ಅತೀ ಕೆಳಸ್ತರದವರಾದ, ಅಸ್ಪೃಶ್ಯರೆನಿಸಿಕೊಂಡ ಪೊಲಯ, ಪರಯ ಮುಂತಾದ ಜಾತಿಯ ಕೆಲವಾರು ಹುಡುಗರನ್ನು ತಮ್ಮ ಶಿವಗಿರಿಯ ಆಶ್ರಮದಲ್ಲೇ ಇರಿಸಿಕೊಂಡು ಅವರಿಗೆ ವೇದಉಪನಿಷತ್ತುಗಳನ್ನು ಕಲಿಸಿದರು. ಪೂಜಾ ವಿಧಿಗಳ ತರಬೇತಿ ನೀಡಿ ದೇವಾಲಯದಲ್ಲಿ ಪೂಜೆಗೆ ನಿಯಮಿಸಿದರು. ಅವರೇ ಅಡುಗೆ ಮಾಡಿ ಆಶ್ರಮಕ್ಕೆ ಬಂದವರಿಗೆ ಬಡಿಸುವುದಕ್ಕೆ ಏರ್ಪಾಟು ಮಾಡಿದರು.

ಸಮಾಜದಲ್ಲಿ ಬಣ್ಣಗುಂದಿ ಬದುಕಬೇಕಾಗಿ ಬಂದ ಎಲ್ಲರನ್ನೂ ಮೇಲೆತ್ತುವ ಉದ್ದೇಶ ಅವರಲ್ಲಿತ್ತು ಎಂಬುದಕ್ಕೆ ಈ ಕ್ರಾಂತಿಕಾರಕ ನಿದರ್ಶನ ಸಾಕು. ಇಷ್ಟೊಂದು ಸಂಖ್ಯೆಯಲ್ಲಿ ನಾರಾಯಣ ಗುರು ದೇವಾಲಯಗಳನ್ನು ಸ್ಥಾಪಿಸಿರುವುದರ ಹಿನ್ನೆಲೆಯೇನು? ಎಂಬ ಬಗ್ಗೆ ಚರ್ಚೆಗಳು ನಡೆದಿವೆ. ಉನ್ನತವರ್ಗದ ಜನರು ಕೆಳವರ್ಗದವರನ್ನು ದೇವಾಲಯದೊಳಗೆ ಪ್ರವೇಶಿಸಲೂ ಬಿಡುತ್ತಿರಲಿಲ್ಲ. ಅವರು ಕೊಡುವ ಕಾಣಿಕೆಯನ್ನಷ್ಟೇ ಸ್ವೀಕರಿಸುತ್ತಿದ್ದರು. ತಲೆ ಬುಡವಿಲ್ಲದಿರುವ ಈ 'ನ್ಯಾಯ' ದಲ್ಲಿರುವ ಅನ್ಯಾಯವನ್ನು ಹೋಗಲಾಡಿಸಲಿಕ್ಕಾಗಿ ಉನ್ನತ ವರ್ಗದವರ ಕೈಗಳಿಂದ ಬಿಡಿಸಿಕೊಳ್ಳಲಿಕ್ಕಾಗಿ 'ಪ್ರತಿ ದೇವಾಲಯಗಳು'

ನಿರ್ಮಾಣಗೊಂಡವು. ಉನ್ನತ ವರ್ಗದವರು ಪೂಜಿಸುವ ಅದೇ ದೇವರುಗಳು ಹಾಗೂ ವಿಭಿನ್ನ ವಿಗ್ರಹಗಳು ಈ ದೇವಾಲಯಗಳಲ್ಲೂ ಸ್ಥಾಪನೆಗೊಂಡವು. ನಾರಾಯಣ ಗುರು ಅಷ್ಟರಲ್ಲೇ ತೃಪ್ತರಾದಂತೆ ಕಂಡು ಬರಲಿಲ್ಲ. ಒಂದು ದೇವಾಲಯದಲ್ಲಿ ವಿಗ್ರಹದ ಬದಲಿಗೆ ಉನ್ನತ ಮೌಲ್ಯಗಳನ್ನಷ್ಟೆ ಪ್ರತಿಪಾದಿಸುವ 'ಸತ್ಯಂ, ಧರ್ಮ, ದಯಾ, ಶಾಂತಿ' ಎಂಬ ಪದಗಳನ್ನಷ್ಟೆ ಕೆತ್ತಿಸಿದರು. ಶೇರ್ತಲೆಯ ಸನಿಹದ ಕಲವಂಕೂಡಮ್ ಎಂಬಲ್ಲಿನ ದೇವಾಲಯದಲ್ಲಿ ಕೇವಲ ಒಂದು ದರ್ಪಣವನ್ನಷ್ಟೆ ಪ್ರತಿಷ್ಠಾಪಿಸಿ ಅದರಲ್ಲಿ' ತತ್ ತ್ವಮ್ ಅಸಿ' ಎಂಬ ಸಾಲನ್ನು ಕೊರೆಯಿಸಿದರು.

ನಾರಾಯಣ ಗುರು ಜನರನ್ನು ತಿದ್ದಿ ಅವರಲ್ಲಿ ಹೊಸ ಸಂಸ್ಕಾರವನ್ನು ಮೂಡಿಸಲು ಪಟ್ಟ ಪ್ರಯತ್ನದ ಪರಿ ಭಿನ್ನ ಹಾಗೂ ಅನಾ ದೃಶ್ಯ. ಅವರು ದೇವಾಲಯ ನಿರ್ಮಾಣಕ್ಕೆ ಆಯ್ದುಕೊಳ್ಳುತ್ತಿದ್ದ ಪರಿಸರಗಳು ಜನಜಂಗುಳಿಯಿಂದ ದೂರವಿರುವ ಪ್ರಶಾಂತವಾದ ನಿಸರ್ಗದ ಮಡಿಲುಗಳು. ಶಾಂತಿಯನ್ನರಸಿ ಬಂದ ಭಕ್ತಾದಿಗಳು ಆ ಪ್ರಕೃತಿಯ ಮಡಿಲಲ್ಲಿ ಹಸುಗೂಸಿನ ನೆಮ್ಮದಿ ಕಾಣಬೇಕು ಎಂಬುದು ಅವರ ಉದ್ದೇಶ.

ಕೆಲವರು 'ತಮ್ಮ ನಗರದಲ್ಲೊಂದು ದೇಗುಲ ಸ್ಥಾಪಿಸಿಕೊಡಿ' ಎಂಬ ಬೇಡಿಕೆಯೊಂದಿಗೆ ಗುರುಗಳನ್ನು ಭೇಟಿಯಾದರು. ಅವರು ಉದ್ದೇಶಿಸುವ ಸ್ಥಳ ಹಾಗೂ ಪರಿಸರವನ್ನು ಗಮನಿಸಿ, 'ಅಲ್ಲೊಂದು ಶಾಲೆ ಕಟ್ಟಿಸಿಬಿಡಿ' ಎಂದು ಹೇಳಿದರು. ದೇಗುಲದ ಪರಿಸರ ವಿಶಾಲವಾಗಿರಬೇಕು, ಸಾಕಷ್ಟು ಗಿಡ ಮರಗಳಿಂದ ತುಂಬಿರಬೇಕು. ಸ್ವಚ್ಛಗಾಳಿ ಬೀಸುತ್ತಿರಬೇಕು, ಪರಿಸರ ಶುದ್ಧವಾಗಿರಬೇಕು. ಒಳ್ಳೆಯ ಲೈಬ್ರರಿ ಇರಬೇಕು, ಸದಾಚಾರವನ್ನು ಬೋಧಿಸುವದಕ್ಕೆ ವ್ಯವಸ್ಥೆ ಬೇಕು.

ಶಿವಲಿಂಗವೆಂಬುದು ಕೇವಲ ಕಲ್ಲು ಎಂಬುದಾಗಿಯೂ ಅದರೊಳಗಿನ ಶಿವನು ಭಕ್ತರಿಂದ ಬಿಂಬಿಸಲಾದವನೆಂದು ಅವರು ನಂಬಿಕೊಂಡಿದ್ದರು.

ಸ್ಥಾನಾಂತರ:

ನಾರಾಯಣ ಗುರುಗಳು ನಿಂತಲ್ಲಿ ನಿಲ್ಲುವ ಜಾಯಮಾನದವರಲ್ಲದವರೆಂದು ಈ ಮೊದಲೇ ಗಮನಿಸಲಾಗಿದೆ. ಶಿವಗಿರಿಯ ಆಶ್ರಮವು ಅಪಾರ ಜನಾಕರ್ಷಣೆಯ ಕೇಂದ್ರಬಿಂದುವಾದೊಡನೆಯೆ ನಾರಾಯಣ ಗುರು ಆಲ್ವಾಯಿಗೆ ಹೊರಟುಹೋಗಿ ಅಲ್ಲೊಂದು ಆಶ್ರಮ ನಿರ್ಮಿಸಿದರು. ಶಂಕರಾಚಾರ್ಯರ ಕಾಲಡಿಗೆ ಆ ಆಶ್ರಮ ಸನಿಹದಲ್ಲಿತ್ತು. 'ಅದ್ವೈತ ಆಶ್ರಮ' ಎಂಬ ಹೆಸರಿನಲ್ಲಿ ಸ್ಥಾಪಿಸಲಾದ ಆಶ್ರಮದಲ್ಲಿ ಸವರ್ಣೀಯರು ಅವರ್ಣೀಯರು ಮಾತ್ರವಲ್ಲದೆ ಹಿಂದುಗಳಲ್ಲದವರೂ ಜೊತೆಯಾಗಿ ವಾಸಿಸುವ, ಜೊತೆಗೆ ಪ್ರಾರ್ಥಿಸುವ ಸೌಕರ್ಯವನ್ನಲ್ಲಿ ಕಲ್ಪಿಸಿಕೊಡಲಾಯಿತು.

ನಾರಾಯಣಗುರು ಅದ್ವೈತ ಆಶ್ರಮದಲ್ಲಿ ಯಾವ ದೇವರನ್ನೂ ಪ್ರತಿಷ್ಠಾಪಿಸಲಿಲ್ಲ. ಪ್ರತ್ಯೇಕ ದೇವಸ್ಥಾನವನ್ನೂ ನಿರ್ಮಿಸಲಿಲ್ಲ. ಒಂದೇ ಜಾತಿ ಒಂದೇ ಮತ, ಒಂದೇ ದೇವರು, ಎರಡಿಲ್ಲವೆಂಬ ತತ್ವವನ್ನು ಪ್ರಾರ್ಥನೆಗಳ ಪಾರಾಯಣದ ಮೂಲಕ ಕಂಡುಕೊಳ್ಳುವುದಷ್ಟೇ ಆ ಆಶ್ರಮ ಸ್ಥಾಪನೆಯ ಉದ್ದೇಶವಾಗಿತ್ತು. ವಿಗ್ರಹ ಸ್ಥಾಪನೆ ದೇವಾಲಯಗಳ ರಚನೆಗೆ ನಾರಾಯಣಗುರು ಎಂದೂ ಅವರ ವಿರೋಧ ಇರಲಿಲ್ಲ. ದೇವಾಲಯಗಳು ಮನುಷ್ಯನ ಚಂಚಲಗೊಂಡ ಮನಸ್ಸನ್ನು ಕೇಂದ್ರೀಕರಿಸಿ ಸೂಕ್ತ ಮಾರ್ಗದತ್ತ ಒಯ್ಯುವದಕ್ಕೆ ಬೇಕಾದ ಚಾಲಕ ಶಕ್ತಿ ಎಂಬುದು ಅವರ ಅಭಿಪ್ರಾಯ. ದೇವಾಲಯ ಪರಿಶುದ್ಧ ವಾತಾವರಣದಲ್ಲಿ ನೆಲೆಗೊಳ್ಳುವುದು, ಸುತ್ತ ಮರಗಿಡಗಳನ್ನು ನೆಟ್ಟು ಬೆಳೆಸುವುದು, ಭಕ್ತಾದಿಗಳು ಸ್ನಾನಾದಿಗಳನ್ನು ಕಟ್ಟುನಿಟ್ಟಾಗಿ

ಮಾಡುವಂತೆ ಪ್ರೇರೇಪಿಸುವುದು - ಇತ್ಯಾದಿಗಳು ಮನುಷ್ಯ ಸಂಸ್ಕಾರದಲ್ಲಿ ಮುಖ್ಯ ಪಾತ್ರ ವಹಿಸುತ್ತವೆ ಎಂಬುದು ಅವರ ಅಭಿಪ್ರಾಯ. ಅಂತರಂಗ ಶುದ್ಧಿ ಬಹಿರಂಗ ಶುದ್ಧಿ ಎರಡೂ ಏಕ ಸಮಾನವಾಗಿ ಪ್ರಮುಖವೆನಿಸುತ್ತವೆ.

ದೇವಾಲಯಗಳಲ್ಲಿ ಉನ್ನತ ಮಟ್ಟದ ಗ್ರಂಥಾಲಯ ವಿರಬೇಕೆಂದೂ ಎಲ್ಲ ಮತಗಳ ಧಾರ್ಮಿಕ ಗ್ರಂಥಗಳು ಅಲ್ಲಿರಬೇಕೆಂದೂ ನಾರಾಯಣಗುರು ಹೇಳಿದ ಮಾತನ್ನು ಬಹಳ ಎಚ್ಚರಿಕೆಯಿಂದ ಗಮನಿಸಬೇಕು. ವಿವೇಕಾನಂದರ ಬಳಿಕ ಇಷ್ಟೊಂದು ಪುರೋಗಾಮಿ ವಿಚಾರಗಳನ್ನು ಪ್ರತಿಪಾದಿಸದವರಲ್ಲಿ ನಾರಾಯಣ ಗುರು ಪ್ರಮುಖರೆನಿಸುತ್ತಾರೆ.

ಗಾಂಧೀಜಿಯವರೊಂದಿಗೆ:

ಮಹಾತ್ಮಾ ಗಾಂಧಿಯವರು ಅಸ್ಪೃಶ್ಯತೆಯನ್ನು ಹೋಗಲಾಡಿಸಲು ನಡೆಸಿದ ಯತ್ನಕ್ಕಿಂತ ನಾರಾಯಣ ಗುರು ನಡೆಸಿದ ಯತ್ನ ಉಚ್ಚಮಟ್ಟದ್ದು ಎನ್ನಬಹುದು. ಒಂದೇ ಜಾತಿ ಎಂಬ ತತ್ವವನ್ನು ಜಾರಿಗೊಳಿಸಲೆಂದು ಅವರು ಪರಮಾವಧಿ ಶ್ರಮಿಸಿದರು. ಗಾಂಧೀಜಿಯವರಾದರೊ ವರ್ಣಾಶ್ರಮಧರ್ಮದಲ್ಲಿ ನಂಬಿಕೆ ಯುಳ್ಳವರಾಗಿದ್ದರು. ಜಾತಿ ಪದ್ಧತಿಯು ಉದ್ಯೋಗವಿತರಣೆಯಲ್ಲಿ ಮಹತ್ವದ ಪಾತ್ರ ವಹಿಸುವುದೆಂಬುದನ್ನು ಅವರು ನಂಬಿದ್ದರು. ಅವರು ವ್ಯಾಪಕ ಕ್ಯಾನ್‌ವಾಸ್‌ನಲ್ಲಿ ದುಡಿದವರಾದ್ದರಿಂದ ವರ್ಣಾಶ್ರಮ ಕಲ್ಪನೆಗಿಂತ ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಕೈಗೊಂಡ ಕೆಲವಾರು ಕಾರ್ಯಕ್ರಮಗಳು ಬಲು ಬೇಗ ಜನಪ್ರಿಯಗೊಂಡು ಅವರು ಅಗ್ರಮಾನ್ಯ ನಾಯಕರಾದರು. ನಾರಾಯಣ ಗುರು ತನ್ನ ಹಿಂದೆ ಒಂದು ಜಾತಿಯನ್ನು ಅಂಟಿಸಿಕೊಂಡವರಾಗಿ ಒಂದೇ ಜಾತಿ ಎಂಬ ಪ್ರಬುದ್ಧ

ತತ್ವವನ್ನು ಬೋಧಿಸಿದರೂ ಗಾಂಧೀಜಿ ಕಂಡ ರಾಷ್ಟ್ರವ್ಯಾಪಿ ಯಶಸ್ಸನ್ನು ಕಾಣಲಿಲ್ಲ.

ಗಾಂಧೀಜಿ ಅಂದು ವರ್ಕಲದಲ್ಲಿ ವಾಸವಾಗಿದ್ದ ನಾರಾಯಣ ಗುರುಗಳನ್ನು ಭೇಟಿಮಾಡಿದಾಗ ಕೆಲವು ಮಹತ್ವ ಪೂರ್ಣ ಚರ್ಚೆಗಳು ನಡೆದವು. ಅವರ್ಣೀಯರನ್ನು ಮತಾಂತರಿಸುವ ಕೆಲಸ ಭರದಿಂದ ನಡೆಯುತ್ತಿದ್ದ ಕಾಲವದು. ಅವರು ಹೀಗೆ ಮತಾಂತರಗೊಳ್ಳುವುದನ್ನು ಗಾಂಧೀಜಿಯವರು ಒಪ್ಪುತ್ತಿರಲಿಲ್ಲ. ನಾರಾಯಣ ಗುರುಗಳೊಂದಿಗೆ ಬಹಳ ಎಚ್ಚರಿಕೆಯಿಂದ ಚರ್ಚೆಮಾಡಿ ಅವರ ಪ್ರಭಾವ ಬಳಸಿ ಕೇರಳದಲ್ಲಿ ಮತಾಂತರ ಕಾರ್ಯ ನಡೆಯದಂತೆ ತಡೆಯಲು ಯತ್ನಿಸಿದರು. ಗುರುಗಳು ಗಾಂಧೀಜಿಯವರ ಅಭಿಪ್ರಾಯವನ್ನು ಒಪ್ಪಲಿಲ್ಲ. ಹಿಂದುವೊಬ್ಬನಿಗೆ ಅನ್ಯಧರ್ಮದಲ್ಲಿ ಆಸಕ್ತಿ ಅಧಿಕವಾಗಿದ್ದು ತನ್ನ ಧರ್ಮದಲ್ಲಿ ಆಸಕ್ತಿ ಇಲ್ಲದಿದ್ದರೆ ಆತನು ಅನ್ಯಧರ್ಮಕ್ಕೆ ಮತಾಂತರಗೊಳ್ಳುವುದು ಕ್ಷೇಮಕರ. ಇದರಿಂದ ಎರಡು ಲಾಭಗಳಿವೆ. ನಿಷ್ಪ್ರಯೋಜಕನಾದ ಒಬ್ಬನನ್ನು ಹಿಂದು ಧರ್ಮ ಕಳೆದುಕೊಳ್ಳುವುದರಿಂದ ಅದಕ್ಕಾಗುವ ಲಾಭವೊಂದು ಬಗೆಯದಾದರೆ ಆಸಕ್ತನೊಬ್ಬನನ್ನು ತನ್ನ ಮತಕ್ಕೆ ಸ್ವಾಗತಿಸಿದ ಸಂತೃಪ್ತಿ ಅನ್ಯಮತಕ್ಕೆ ದೊರಕುವುದು, ಇನ್ನೊಂದು ಬಗೆಯದು. ಮಾತ್ರವಲ್ಲದೆ ಆತ ತಾನು ಕಂಡುಕೊಳ್ಳಬೇಕಾದ ನೆಲೆಯನ್ನು ಕಂಡುಕೊಳ್ಳುತ್ತಾನೆ ಅದರಲ್ಲಿ ತಪ್ಪೇನಿದೆ ಎಂಬುದು ಗುರುಗಳ ವಾದ.

ನಾರಾಯಣ ಗುರುಗಳ ವಾದಸರಣಿಯನ್ನು ಒಪ್ಪಿಕೊಳ್ಳಬೇಕಿದ್ದರೆ ಉದಾರಿವಾದೀ ಚಿಂತನೆಗಳಿರಬೇಕು. ಮಹಾತ್ಮಾ ಗಾಂಧಿಯವರು ನಾರಾಯಣಗುರುಗಳ ವಿಚಾರಧಾರೆಗೆ ತಲೆದೂಗಿದ್ದು ಮಾತ್ರವಲ್ಲದೇ ಸಾಮಾಜಿಕ, ಆರ್ಥಿಕ ಕಾರಣಗಳಿಗಾಗಿ

ಮತಾಂತರಗೊಳ್ಳುವ ಮಂದಿಯ ಮನಸ್ಸನ್ನು ಅರ್ಥೈಸುವ ಅನಿವಾರ್ಯತೆಯನ್ನು ಕಂಡುಕೊಂಡರು. 'ನವಜೀವನ್' ಎಂಬ ಹೆಸರಿನಲ್ಲಿ ಅವರು ನಡೆಸುತ್ತಿದ್ದ ಪತ್ರಿಕೆಗೆ ಆಮೇಲೆ 'ಹರಿಜನ್' ಎಂಬ ಹೆಸರು ಬಂತು. ತಾನು ಸ್ವತಃ ಹರಿಜನನೆಂದು ಘೋಷಿಸಿಕೊಂಡು ಅವರ ನೋವು ನಲಿವುಗಳಲ್ಲಿ ಭಾಗಿಯಾದರು. ನಿಮ್ನ ವರ್ಗದವರನ್ನು ಮೇಲೆತ್ತಲು ನಾರಾಯಣಗುರುಗಳು ಶಿವಗಿರಿಯಲ್ಲಿ ಅನುಷ್ಠಾನಕ್ಕೆ ತಂದ 'ಎಲ್ಲರೂ ಸಮಾನರು' ಎಂಬ ತತ್ವ ಗಾಂಧೀಜಿಯವರ ಮೇಲೆ ಸಾಕಷ್ಟು ಪ್ರಭಾವ ಬೀರಿದೆ ಎಂಬುದಕ್ಕೆ ಅನ್ಯ ನಿದರ್ಶನಗಳು ಬೇಕಿಲ್ಲ.

ಒಮ್ಮೆ ರವೀಂದ್ರನಾಥ ಠಾಕೂರರು ಶಿವಗಿರಿಮಠಕ್ಕೆ ಆಮಂತ್ರಿತರಾಗಿ ಬಂದರು. ನಾರಾಯಣಗುರುಗಳ ಮುಖದ ಅಪೂರ್ವ ತೇಜಸ್ಸು ಠಾಕೂರರನ್ನು ಬಹುವಾಗಿ ಆಕರ್ಷಿಸಿತು. ಸಂಭಾಷಣೆ ಮುಗಿದು ಹೊರಟುನಿಂತ ಠಾಕೂರರು ಗುರುಗಳ ಕಾಲಿಗೆರಗಿದರು. ಗುರುಗಳು ಕೈಯೆತ್ತಿ ಆಶೀರ್ವದಿಸಬಹುದೆಂದು ನಿರೀಕ್ಷಿಸಿದ್ದ ಅವರಿಗೆ ನಿರಾಶೆಕಾದಿತ್ತು. ಗುರುಗಳು ಮುಖದಲ್ಲಿ ಮಂದಹಾಸವನ್ನಷ್ಟೇ ತಂದರು ಹೊರತು ಠಾಕೂರರಂತಹ ಪ್ರತಿಭಾನ್ವಿತರನ್ನು ಕೈಯೆತ್ತಿ ಹರಸುವಷ್ಟು ಆಧಿಕ್ಯ ತನ್ನಲ್ಲಿ ಇದೆಯೆಂದು ಅವರು ಭಾವಿಸಲಿಲ್ಲ. ಠಾಕೂರರು ತಲೆಯೆತ್ತಿ ಅವರ ಕೈಗಳನ್ನು ಚುಂಬಿಸಿ ತೃಪ್ತಿ ಕಂಡರು.

ಆಧುನಿಕ ಸನ್ಯಾಸಿಗಳು ಸರ್ವಜ್ಞನಂತೆಯೋ, ದಿವ್ಯಜ್ಞನಂತೆಯೋ ಮೆರೆಯುವದಷ್ಟೇ ಅಲ್ಲದೆ ಸಕಲ ಚರಾ ಚರಗಳನ್ನು ಆಶೀರ್ವದಿಸುವುದು ತಮ್ಮ ಹಕ್ಕು ಎಂದು ತಿಳಿದಿದ್ದರೆ, ಗುರುಗಳು ಅದಕ್ಕೆ ವ್ಯತಿರಿಕ್ತವಾಗಿ, ಸರಳತೆಯ ಸಾಕಾರ ರೂಪವಾಗಿ ಕಾಣಿಸಿಕೊಂಡರು. ಅವರ ಸಮಾನಶೀಲ ಮನೋವೃತ್ತಿ ಗಮನಾರ್ಹವೆನಿಸುತ್ತದೆ.

ಮದುವೆ, ಉತ್ತರ ಕ್ರಿಯೆ ಇತ್ಯಾದಿ:

ಸಹಸ್ರ ಸಂಖ್ಯೆಯಲ್ಲಿ ಅತಿಥಿಗಳನ್ನು ಆಹ್ವಾನಿಸಿ ಆಡಂಬರವನ್ನು ಮೆರೆಯುವ ವಿವಾಹ ಸಮಾರಂಭಗಳನ್ನು ಎಲ್ಲೆಲ್ಲೂ ಕಾಣುತ್ತೇವೆ. ಇದಕ್ಕೆ ವ್ಯತಿರಿಕ್ತವಾದ ವಿವಾಹ ಪದ್ಧತಿಯ ಅಗತ್ಯವನ್ನು ನಾರಾಯಣ ಗುರುಗಳು ಎಂದೋ ಒತ್ತಿ ಹೇಳಿದ್ದರು. "ವಿವಾಹ ಸಮಾರಂಭದಲ್ಲಿ ಹತ್ತುಮಂದಿ ಮಾತ್ರ ಭಾಗವಹಿಸಬೇಕು. ದೇವಾಲಯ ವಿದ್ಯಾಲಯಗಳಲ್ಲಿ ವಿವಾಹ ನೆರವೇರಬಹುದು. ಆ ಸಂಸ್ಥೆಗಳಲ್ಲಿನ ದಾಖಲಾತಿ ಪುಸ್ತಕದಲ್ಲಿ ಆ ವಿವಾಹವನ್ನು ದಾಖಲಿಸಬೇಕು. ತಮ್ಮ ಮಕ್ಕಳ ವಿವಾಹಕ್ಕೆ ಅತಿಯಾದ ಖರ್ಚು ಮಾಡಬೇಕೆಂಬ ಉದ್ದೇಶವುಳ್ಳ ಹೆತ್ತವರು ಆ ಹಣವನ್ನು ಬ್ಯಾಂಕಿನಲ್ಲಿರಿಸಿ ಅದರ ರಸೀದಿಯನ್ನು ವಿವಾಹ ಸಂದರ್ಭದಲ್ಲಿ ತಮ್ಮ ಮಕ್ಕಳಿಗೆ ನೀಡಬಹುದು. ವಿವಾಹದ ಹೆಸರಿನಲ್ಲಿ ಸಾರ್ವಜನಿಕ ಭೋಜನವೇರ್ಪಡಿಸುವುದು ಅರ್ಥಶೂನ್ಯ. ಹಾಗೆ ಭೋಜನ ಕೂಟವೇರ್ಪಡಿಸಬೇಕೆಂದಿದ್ದರೆ ವ್ಯಕ್ತಿಯೂ ತನ್ನ ಅರವತ್ತು ವರ್ಷಗಳ ಬದುಕಿನ ಒಂದು ಘಟ್ಟವನ್ನು ಮುಗಿಸುವ ಹಂತದಲ್ಲಿ ಪುಷ್ಯಬ್ದವನ್ನಾಚರಿಸಿ ಭೋಜನವನ್ನು ನೀಡಲಿ; ದೊಡ್ಡ ಅಪರಾಧ ಎನಿಸುವುದಿಲ್ಲ. ಬದಲಿಗೆ ಜೀವನದ ಬಹುಮುಖ್ಯ ಭಾಗಗಳೆಲ್ಲ ಇನ್ನೂ ಬಾಕಿಯಿರುತ್ತಲೇ ಇಂತಹ ಭೋಜನಾದಿಗಳಿಗೆ ಹಣ ಪೋಲು ಮಾಡಿದರೆ ಮುಂದಿನ ಜೀವನ ಕಷ್ಟದಾಯಕ ಆಗುವುದೆಂಬುದರ ಬಗ್ಗೆ ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ".

ವಿವಾಹಾದಿ ಕಾರ್ಯಕ್ರಮಗಳ ಆಡಂಬರ ನಿಮಿತ್ತವಾಗಿ ಸಾಲಸೋಲಗಳಾಗಿ ಮುಂದಿನ ಬದುಕನ್ನು ಬರಡು ಮಾಡಿಕೊಂಡ ಅನೇಕರನ್ನು ಕಂಡ ಗುರುಗಳು ಮುಂದಿನ ಪೀಳಿಗೆಗೆ 'ತಿಳಿದು ವರ್ತಿಸು' ವಂತೆ ಎಚ್ಚರ ನೀಡಿದ್ದಾರೆ.

ಉತ್ತರ ಕ್ರಿಯೆಯ ಬಗ್ಗೆ ನಾರಾಯಣ ಗುರುಗಳು ನೀಡು ಸಲಹೆಯು ಕೂಡ ಅನುಕರಣೀಯ. ಮೃತನ ಅತಿ ಸನಿಹದವರು ಹತ ದಿನಗಳಕಾಲ ನಿತ್ಯವೂ ಪ್ರಭಾತದಲ್ಲಿ ಸ್ನಾನಾದಿಗಳಿಂದ ಶುದ್ಧರಾ ಮೃತನ ಆತ್ಮಕ್ಕೆ ಶಾಂತಿಯನ್ನು ಕೋರುವ ಪ್ರಾರ್ಥನೆ ಮಾಡಬೇಕು ಪುರೋಹಿತರನ್ನು ಕರೆಯಿಸಿ ಅವರ ಮಾತಿನಂತೆ ಸಾವಿರಾ ರೂಪಾಯಿಗಳನ್ನು ವ್ಯಯಿಸಿ ಊರವರ ಹೊಟ್ಟೆ ತುಂಬಿಸುವುದರಿಂ ಯಾವ ಶಾಂತಿಯೂ ಉಂಟಾಗುವುದಿಲ್ಲ. ಮೃತರ ಮೇಲಿನ ಸ್ನೇಹವನ ಅವರು ನಿಧನರಾದಾಗ ಖರ್ಚು ಮಾಡುವುದರ ಮೂಲ ತೋರಿಸುವುದು ಮೂರ್ಖತನ. ಬದಲಿಗೆ ಆ ಮೊತ್ತವನ ಯಾವುದಾದರು ದೇವಾಲಯ, ಗ್ರಂಥಾಲಯ, ವಿದ್ಯಾಲಯಗ ಉದ್ಧಾರಕ್ಕೆ ವಿನಿಯೋಗಿಸಿದರೆ ನಿಜವಾದ ಸಾರ್ಥಕ್ಯವನ್ನು ಕಂಡುಕೊಳ್ಳುವುದು ಸಾಧ್ಯ.

ಯಾವುದೇ ಹೊಸ ನಿರ್ದೇಶನಗಳನ್ನು ವಿವೇಕಿಗಳೂ ಶಕ್ತರೂ ಆದವರು ಮೊದಲಿಗೆ ಕಾರ್ಯಗತಗೊಳಿಸಬೇಕು. ಹಾಗಾದರೆ ಮಾತ್ರ ಉಳಿದವರು ಅದನ್ನು ಅನುಕರಿಸಿಯಾರು. ಸಮಾಜದ ಆರ್ಥಿ ಸ್ಥಿರತೆಯಿಲ್ಲದ ಮಂದಿ ಪ್ರತಿಷ್ಠೆಯ ಹೆಸರಿನಲ್ಲಿ ತಮ್ಮನ್ನು ತಾವ ಕಳೆದುಕೊಳ್ಳುವ ಬಹುತೇಕ ಸಂದರ್ಭಗಳಿಗೆ ಇಂತಹ ಅದ್ದೂರಿಯ ಸಮಾರಾಧನೆಗಳು ಕಾರಣವಾಗುತ್ತವೆ.

ಸಮಾಜದ ಕೆಳಸ್ತರದ ಮಂದಿಯನ್ನು ಮೇಲಕ್ಕೆತ್ತುವುದರಲ್ಲಿ ಇಂತಹ ಕೆಲವು ಚಿಂತನೆಗಳು ಎಷ್ಟು ಪ್ರಯೋಜನಕಾರಿ ಎಂಬುದನ್ನು ಮುಂದಾಲೋಚನೆಯುಳ್ಳ ನಾರಾಯಣ ಗುರು ಎಂದೋ ಸಮಾಜದ ಮುಂದಿರಿಸಿದ್ದಾರೆ.

ಮತೀಯವಾದ:

ಪರಮತ ಸಹಿಷ್ಣುತೆಯನ್ನು ಅನುಷ್ಠಾನಕ್ಕೆ ತರುವ ವಿಶೇಷ ಯತ್ನವನ್ನು ಗುರುಗಳು ಮಾಡಿದ್ದಾರೆ. ಆ ದಿನಗಳಲ್ಲಿ ಸಮಾಜದ ಕೆಳವರ್ಗದವರು ಮತಪರಿವರ್ತನೆಗೊಳಪಡುತ್ತಿದ್ದುದು ಸಾಮಾನ್ಯ ವಿಷಯವಾಗಿತ್ತು. ಹೆಚ್ಚಿನ ಪರಿವರ್ತನೆಗಳು ಕ್ಷಣಿಕವಾದ ಆಮಿಷ ನಿಮಿತ್ತವಾದವುಗಳು. ಮತಾಂತರ ಹೊಂದುವಾತ ತಾನು ಸ್ವೀಕರಿಸುವ ಮತವನ್ನು ಅರ್ಥೈಸಿ ಹಾಗೂ ತನ್ನ ಮತಕ್ಕಿಂತ ತಾನು ಸ್ವೀಕರಿಸುವ ಮತ ಯಾಕೆ ಶ್ರೇಷ್ಠ ಎಂಬುದನ್ನು ತಿಳಿದು ಸ್ವೀಕರಿಸುವುದನ್ನು ಗುರುಗಳು ಒಪ್ಪುತ್ತಿದ್ದರು.

ಅಂದು ಕ್ರೈಸ್ತ ಮತ ಪ್ರಚಾರದ ಪ್ರವಾಹದಲ್ಲಿ ಕೊಚ್ಚಿಹೋದ ಈಳವ ಜನಾಂಗದ ಒಂದು ಸಮೂಹವು ನೆಯಾಟ್ಟುಕ್ಕರ ಎಂಬಲ್ಲಿ ಇಕ್ಕಟ್ಟಿನಲ್ಲಿ ಸಿಲುಕಿತ್ತು. ಮತಾನುಸಾರ ಕ್ರೈಸ್ತರಾಗಿಯೂ ಜಾತ್ಯಾನುಸಾರ ಈಳವರಾಗಿಯೂ ಬದುಕು ನಡೆಸುತ್ತಿದ್ದ ಅವರ ಬಂಧುಗಳು ಹಿಂದೂ ಧರ್ಮದಲ್ಲಿದ್ದುಕೊಂಡು ಆಸ್ತಿ - ಪಾಸ್ತಿಗಳನ್ನು ಹಂಚಿಕೊಳ್ಳ ಬೇಕಾದ ಗೊಂದಲದಲ್ಲಿದ್ದರು. ಮತವು ಸ್ಪಷ್ಟವಾಗಿ ಅವರ ನಡುವೆ ಗೊಂದಲ ನಿರ್ಮಿಸಿತ್ತು. ಅದನ್ನು ಕಂಡ ಗುರುಗಳು ಅದಕ್ಕೊಂದು ಪರಿಹಾರಕಂಡುಕೊಳ್ಳಬೇಕೆಂದುಕೊಂಡರು. ಸಮುದಾಯದ ಎಲ್ಲರೂ ಒಂದೇ ಮತವನ್ನು ಅನುಸರಿಸುವುದು, ನ್ಯಾಯಸಮ್ಮತವೆಂಬುದನ್ನು ಮನಗಂಡ ಅವರು ಕ್ರೈಸ್ತಮತವನ್ನು ಅವಲಂಬಿಸಿಕೊಂಡಿದ್ದ ಗುಂಪಿನ ಜೊತೆ ಮಾತುಕತೆ ನಡೆಸಿ ಅವರೆಲ್ಲರನ್ನೂ ಹಿಂದೂಮತಕ್ಕೆ ಬರಮಾಡಿಕೊಂಡರು.

ಕೆಲವು ಪ್ರಮುಖ ವಿಚಾರಗಳನ್ನು ಈ ಘಟ್ಟದಲ್ಲಿ ನಾವು ಮನವರಿಕೆ ಮಾಡಿಕೊಳ್ಳಬಹುದು. ಒಂದು, ನಾರಾಯಣಗುರುಗಳು ಯಾವ ಮತವನ್ನು ಯಾರು ನಂಬುವದಿದ್ದರೂ ಅದನ್ನು ವಿರೋಧಿಸಿದವರಲ್ಲ. ತಾನು ಸ್ವತಃ ಹಿಂದೂ ಮತಾವಲಂಬಿಯಾಗಿ ಉಳಿದ ಈಳವರೊಂದಿಗೆ ಕ್ರೈಸ್ತರಾಗಿ ಪಲ್ಲಟಗೊಳ್ಳುವಂತೆ ಹೇಳುವುದಕ್ಕೆ ಅವರಿಗೆ ನೈತಿಕ ಹಕ್ಕಿರಲಿಲ್ಲ. ಆ ನಿಮಿತ್ತವಾಗಿ ಕ್ರೈಸ್ತರಾಗಿದ್ದ ಈಳವರನ್ನೂ ಹಿಂದೂ ಮತಕ್ಕೆ ಮರಳಿ ಬರುವಂತೆ ವಿನಂತಿಸುವುದು ಸೂಕ್ತವೆಂದು ಅವರು ತಿಳಿದದ್ದು. ಎರಡು, ಸಮಸ್ಯೆಯನ್ನು ಇನ್ನಷ್ಟು ಜಟಿಲಗೊಳಿಸುತ್ತ ಹೋಗುವುದಕ್ಕಿಂತ ಪರಿಹಾರೋಪಾಯಗಳನ್ನು ಕಂಡುಕೊಳ್ಳುವುದು ಸೂಕ್ತ ಎಂದು ಅವರ ನಂಬಿಕೊಂಡದ್ದು. (ಇದರ ಅರ್ಥ ನಾರಾಯಣ ಗುರುಗಳು ಮತಾಂತರವನ್ನು ಅಥವಾ ಮರಳಿ ಮತಾಂತರ ಗೊಳ್ಳುವುದನ್ನು ಉತ್ತೇಜಿಸುತ್ತಿದ್ದರೆಂದಲ್ಲ.)

ಎಲ್ಲಕ್ಕಿಂತ ಮುಖ್ಯವಾದುದೆಂದರೆ ಒಮ್ಮೆ ಹಿಂದೂ ಧರ್ಮವನ್ನು ತೊರೆದಾತನಿಗೆ ಆ ಧರ್ಮಕ್ಕೆ ಮರುಪ್ರವೇಶವಿಲ್ಲ ಎಂಬುದಾಗಿ ಶಾಸ್ತ್ರೋಕ್ತಿಗಳೊಂದಿಗೆ ಸಮರ್ಥನೆ ನೀಡುತ್ತಿದ್ದ ಸವರ್ಣೀಯರ ಅಡ್ಡಗೋಡೆಗಳನ್ನು ಮುರಿದು 'ಧರ್ಮವು ಯಾರೊಬ್ಬನ ಕೈ ಗೊಂಬೆಯಲ್ಲ' ಎಂಬುದನ್ನು ತೋರಿಸಿಕೊಟ್ಟದ್ದು ಗುರುಗಳಹೆಚ್ಚುಗಾರಿಕೆ.

ಅದರೊಂದಿಗೆ ಅವರ್ಣೀಯರಲ್ಲಿದ್ದ ಅನೇಕ ನ್ಯೂನತೆಗಳ ಕಡೆಗೆ ಅವರು ಗಮನ ಹರಿಸಿದರು. ಯಾವ ನ್ಯೂನತೆಗಳು ಅವರನ್ನು ಸಮಾಜದ ಕೆಳವರ್ಗದವರನ್ನಾಗಿ ಸದಾಕಾಲವೂ ಇರಿಸುತ್ತಿತ್ತೊ ಅವೇ ನ್ಯೂನತೆಗಳು ಅವರ ಮತಪರಿವರ್ತನೆಗೂ ಕಾರಣವಾಗಿತ್ತು. ಅಂತಹ

ನ್ಯೂನತೆಗಳನ್ನು ನೀಗುವ ರಹದಾರಿಗಳನ್ನು ಹೊರಗಡೆಯಿಂದ ಆಮದು ಮಾಡದೆ ಒಳಗಡೆಯಿಂದಲೇ ಹುಡುಕಿಕೊಳ್ಳಬೇಕೆಂಬುದು ಅವರ ವಾದ. ಅದಕ್ಕವರು ಕಂಡುಕೊಂಡ ಪರಿಹಾರದಲ್ಲಿ ಮೊದಲನೆಯದು ವಿದ್ಯಾಭ್ಯಾಸ. ಅವರ್ಣೀಯರು ವಿದ್ಯಾವಂತರಾಗಬೇಕು. ಆ ಮೂಲಕ ಹೆಚ್ಚಿನ ಸಮಸ್ಯೆಗಳನ್ನು ತೊಡೆದು ಹಾಕಬಹುದು, ಎಂಬುದು ಅವರ ವಾದವಾಗಿತ್ತು. ಅದನ್ನು ಯಶಸ್ಸುಗೊಳಿಸುವ ನಿಟ್ಟಿನಲ್ಲಿ ಗುರುಗಳು ಸ್ವತಃ ಶಾಲೆಗಳನ್ನು ನಿರ್ಮಿಸಿ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸಿದರು.

ಅವರ್ಣೀಯರ ಆರಾಧನಾ ಕ್ರಮವನ್ನು ಗುರುಗಳು ಒಪ್ಪಲಿಲ್ಲ. ಅದರ ಬುಡವನ್ನೇ ಅಲುಗಾಡಿಸಿದರು. ಭೂತಾರಾಧನೆ ಪಿಶಾಚಿಗಳ ಆರಾಧನೆ ಮಧುಮಾಂಸ ಸಮರ್ಪಣೆ - ಇತ್ಯಾದಿಗಳನ್ನು ನಿವಾರಿಸಿ ಹೊಸ ಸಂಸ್ಕಾರವನ್ನು ನೆಲೆಗೊಳಿಸುವಲ್ಲಿ ಗುರುಗಳು ವಹಿಸಿದ ಪಾತ್ರ ಅತ್ಯಂತ ಹಿರಿದು.

ಗುರುಗಳು ರೇಗಾಡುತ್ತಿದ್ದ ಸಂದರ್ಭಗಳು ವಿರಳ.. ಪ್ರಾಣಿಹಿಂಸೆಯನ್ನು ಸಮರ್ಥಿಸುವ ಒಂದು ತಂಡದವರೊಂದಿಗೆ ಗುರುಗಳು ಮಾತನಾಡುತ್ತಿದ್ದವರು ಇದ್ದಕಿದ್ದಂತೆಯೆ ನಿರ್ವಿಕಾರವಾಗಿ ರೇಗಿಬಿಟ್ಟರು. ಅದಕ್ಕೆ ಕಾರಣವುಂಟು. ಪ್ರಾಣಿಬಲಿ ಸಲ್ಲದೆಂಬ ಮಾತನ್ನು ವಿವಿಧ ರೀತಿಯಲ್ಲಿ ಸಮರ್ಥಿಸಿ ಕೊಟ್ಟಬಳಿಕ ಆ ತಂಡದ ಒಬ್ಬಾತ 'ಕೋಳಿಯ ಬದಲಿಗೆ ಕುಂಬಳಕಾಯಿಯನ್ನು ಕೊಚ್ಚಿ ಬಲಿಕರ್ಮವನ್ನು ನೆರವೇರಿಸಬಹುದಲ್ಲ' ಎಂದನು. ತಕ್ಷಣ ಗುರುಗಳು, 'ಅದು ಬೇಕಾಗಿಲ್ಲ ಕೋಳಿಯನ್ನು ಬಲಿಕೊಡುವಾತನ ಮಗನನ್ನು ಬಲಿಕೊಟ್ಟರೆ ದೋಷವೇನು?' ಎಂದರು.

ಬಳಿಕ ಮಾತು ಮುಂದುವರಿಸುವ ಧೈರ್ಯ ಯಾರಿಗೂ ಉಂಟಾಗಿರಲಿಕ್ಕಿಲ್ಲ. ಸಾತ್ವಿಕ ಪೂಜೆಯ ಮಹತ್ವವನ್ನು ಅವರು ವಿವಿಧ

ಪರಿಯಾಗಿ ತಿಳಿಸಿಕೊಟ್ಟು ಅವರು ಮಂದಿಯ ಅಜ್ಞಾನವನ್ನು ಹೋಗಲಾಡಿಸಿದರು. ಭೂತ, ದೆವ್ವಾದಿಗಳಿಗೆ ಹೆದರಿ ಬದುಕುತ್ತಿದ್ದ ಮಂದಿಗೆ ತನ್ಮೂಲಕ ಹೊಸ ಚೈತನ್ಯ ಮೂಡಿ ಬಂತು.

ಅಧ್ಯಾಯ ೫

ಸಂದೇಹ ನಿವಾರಣೆಗಳು

ಅನೇಕ ಭಕ್ತಾದಿಗಳು ವಿವಿಧ ಪ್ರದೇಶಗಳಿಂದ ಗುರುಗಳ ಭೇಟಿಗೆ ಬರುತ್ತಾರೆ. ಬರುವವರು ತಮ್ಮೊಂದಿಗೆ ಅನೇಕ ಸಂದೇಹಗಳನ್ನು ಸಮಸ್ಯೆಗಳನ್ನು ಹೊತ್ತು ತರುತ್ತಾರೆ. ಮಂದಿಯ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಪ್ರಯತ್ನದಲ್ಲಿ ಗುರುಗಳು ಎಚ್ಚರಿಕೆಯಿಂದ ನಡೆದುಕೊಳ್ಳುತ್ತಾರೆ.

ಒಬ್ಬಾತ ಪ್ರಶ್ನಿಸಿದ.

''ನಿಮ್ಮ ಹೆಸರೇನು?''

''ನಾರಾಯಣನ್'' ಗುರುಗಳು ಉತ್ತರಿಸಿದರು.

''ಯಾವ ಜಾತಿ?''

''ಕಂಡರೆ ಏನೆಂದು ತೋರುವುದು?''

''ಕಂಡಾಗ ಏನೂ ಗೊತ್ತಾಗುವುದಿಲ್ಲ?''

''ಕಂಡಾಗ ಗೊತ್ತಾಗದಿದ್ದರೆ ಕೇಳಿದಾಗ ಹೇಗೆ ಗೊತ್ತಾದಿತು?''

ಈ ಸಂಭಾಷಣೆಯನ್ನು ಗುರುಗಳು ಅನೇಕ ಸಂದರ್ಭಗಳಲ್ಲಿ ಉದಾಹರಣೆಗಾಗಿ ಬಳಸುತ್ತಿದ್ದರು. ಮುಂದುವರಿದು ಗುರುಗಳು "ಜಾತಿ ಒಂದೇ, ಅನೇಕ ಜಾತಿಗಳಿಲ್ಲ. ಜಾತಿ ಒಂದೇ ಅನ್ನೋದಕ್ಕೆ ಪ್ರತ್ಯೇಕ ನಿದರ್ಶನಗಳ ಅಗತ್ಯವಿಲ್ಲ. ಒಂದು ನಾಯಿ ಇನ್ನೊಂದನ್ನು ಕಂಡಾಗ ಅದು ತನ್ನ ಜಾತಿಯದೆಂದು ಗುರುತಿಸಬಲ್ಲುದು. ಮೃಗಗಳೆಲ್ಲವೂ ಹೀಗೇನೆ. ಮನುಷ್ಯರು ಮಾತ್ರ ತನ್ನ ಜಾತಿ, ಇತರರ ಜಾತಿ ಎಂಬುದಾಗಿ ಜಾತಿ ಹುಡುಕುವ ಪ್ರಯತ್ನ ಮಾಡುತ್ತಾರೆ. ಅಂದರೆ, ಮನುಷ್ಯರು ಮೃಗಗಳಿಗಿಂತಲೂ ಕೀಳು ಎಂದು ತಿಳಿಯಬೇಕೇನು?" ಎಂಬುದಾಗಿ ಸವಾಲೆಸೆಯುತ್ತಾರೆ.

ಒಮ್ಮೆ ಕೆಲವು ಸಂದರ್ಶಕರು ಗುರುಗಳ ಬಳಿ ಬಂದು ತಾವು ನಿರ್ಮಿಸುತ್ತಿರುವ ದೇಗುಲದಲ್ಲಿ ವಿಗ್ರಹ ಪ್ರತಿಷ್ಠಾಪನೆ ಮಾಡಿ ಕೊಡಬೇಕೆಂದರು. ಗುರುಗಳು, "ಯಾವ ವಿಗ್ರಹ ಪ್ರತಿಷ್ಠಾಪಿಸಲಿ?" ಎಂದು ಕೇಳಿದರು. ಅದಕ್ಕವರು "ನೀವು ಉದ್ದೇಶ ಪಡುವ ಯಾವುದೇ ವಿಗ್ರಹವಾಗಬಹುದು" ಎಂದರು. ಅದಕ್ಕೆ ಗುರುಗಳು, "ಅಲ್ಲೊಂದು ದೀಪವನ್ನು ತೂಗಿಹಾಕೋಣ" ಎಂದರು.

ಕೆಲವೊಮ್ಮೆ ಗುರುಗಳು ಹಾಗೇನೆ ಭಕ್ತರನ್ನು ತಮ್ಮೊಂದಿಗೆ ಕೊಂಡೊಯ್ಯುವ ಪ್ರಯತ್ನದ ಮೆಟ್ಟಿಲುಗಳಾಗಿ ಈ ಮಾತುಗಳು ಕಾಣಿಸಿಕೊಳ್ಳುತ್ತವೆ.

ಒಂದನೆಯ ಮಹಾಯುದ್ಧದಲ್ಲಿ ಬ್ರಿಟಿಷ್‌ರಿಗೆ ಜಯವಾಗಲೆಂದು ಗುರುಗಳು ಪ್ರಾರ್ಥಿಸಿದ್ದನ್ನು ಕೆಲವರು ಪ್ರಶ್ನಿಸಿದರು. ಅದಕ್ಕವರು "ಬ್ರಿಟಿಷರು ನಮಗೆ ಸನ್ಯಾಸ ನೀಡಿದ ಗುರುಗಳು" ಎಂದರು. ಶ್ರೀರಾಮನ ಯುಗದಲ್ಲಾದರೂ ಸನ್ಯಾಸ ದೀಕ್ಷೆ ಅವರ್ಣೀಯರಿಗೆ ಬಾಹಿರವಾಗಿತ್ತು ಹಿಂದೂಗಳು ಮನುಸ್ಮೃತಿಯನ್ನು

ಆಧಾರವಾಗಿಟ್ಟುಕೊಂಡು ಅವರ್ಣೀಯರನ್ನು ಸನ್ಯಾಸದಿಂದ ಹೊರಗಿಟ್ಟರೆ, ಬ್ರಿಟಿಷರು "ಯಾರು ಏನು ಬೇಕಾದರೂ ಆಗಬಹುದೆಂದು ಕಲ್ಪಿಸಿದರು. ಆದ್ದರಿಂದ ಅವರು ನಮಗೆ ಗುರುಸಮಾನರು ಅವರಿಗೆ ಜಯವಾಗಲೆಂದು ಪ್ರಾರ್ಥಿಸಿದ್ದರಲ್ಲಿ ತಪ್ಪೇನು?" ಎಂಬುದು ಗುರುಗಳ ಪ್ರಶ್ನೆ.

ಗುರುಗಳಿಗೆ ಪ್ರಾಣಿಗಳ ಮೇಲೆ ಅಪಾರ ದಯೆ. ಚಿಂತಾದ್ರಿಪೇಟೆಯಲ್ಲಿ ಅವರೊಂದು ಅದ್ವೈತಾಶ್ರಮ ಸ್ಥಾಪಿಸಿದ್ದರು. ಅಲ್ಲಿ ಕುದುರೆಗಾಡಿಯಲ್ಲಿ ಸಂಚರಿಸಬೇಕಾದ ಪ್ರಮೇಯ ಬಂದಾಗ ಅವರದಕ್ಕೆ ಒಪ್ಪಲಿಲ್ಲ. ಆದರೆ ರಿಕ್ಷಾವಾಲಾ ಎಳೆಯುವ ಬಂಡಿಯಲ್ಲಿ ಅವರು ಕುಳಿತುಕೊಂಡರು. ಇದೇಕೆ ಹೀಗೆ? ಎಂದು ಪ್ರಶ್ನಿಸಲಾಗಿ ಅವರೆಂದರು "ರಿಕ್ಷಾವಾಲಾ ಎಳೆಯುವ ಬಂಡಿಯಲ್ಲಿ ನಾವು ಕುಳಿತಾಗ ಎಳೆಯುವಾತನಿಗೂ ತನ್ನ ಸಂಪಾದನೆ ಇತ್ಯಾದಿಗಳ ನಿಮಿತ್ತವಾಗಿ ಆಸಕ್ತಿ ಇರುತ್ತದೆ. ಕುದುರೆಗಳಿಗೆ ಯಾವ ತೆರನಾದ ಆಸಕ್ತಿ? ಗಾಡಿ ಹೊಡೆಯುವವನ ಏಟಿಗೆ ಅದು ತಾಳ ಹಾಕುತ್ತದೆ."

ಒಂದು ಜಾತಿ, ಒಂದು ಮತ:

೧೯೧೮ ರ ಬಳಿಕದ ಕಾಲಘಟ್ಟ ಗುರುಗಳ ಜೀವನದಲ್ಲಿ ಬಹಳ ಮಹತ್ವಪೂರ್ಣವಾದುದು. ಹಿಂದೆ ತಾನು ಮಾಡಿದ ಅವಿಶ್ರಾಂತ ದುಡಿಮೆಯ ಫಲವನ್ನವರು ಕಣ್ಣಾರೆ ಕಂಡ ದಿವಸಗಳವು. ಸಹಸ್ರ ಸಂಖ್ಯೆಯಲ್ಲಿ ತನ್ನ ಬಳಿಗೆ ಬರುವ ಸಂದರ್ಶಕರ ಗೌರವಾದರಗಳಿಗೆ ಪಾತ್ರವಾಗುವುದಷ್ಟೇ ಅಲ್ಲದೆ ಅವರ ಸಮಸ್ಯೆಗಳನ್ನು ಕುರಿತು ಚರ್ಚಿಸಿ, ಪರಿಹಾರ ಕಂಡುಕೊಳ್ಳುವುದು ಇತ್ಯಾದಿಗಳಲ್ಲಿ ಗುರುಗಳು ಹೆಚ್ಚು ತಲ್ಲೀನರಾಗುತ್ತಿದ್ದರು. ೧೯೨೦ರಲ್ಲಿ ಗುರುಗಳು ಎರಡು ಪ್ರಮುಖ ಸಂದೇಶಗಳನ್ನು ಪ್ರಕಟ ಪಡಿಸಿದರು. ಮೊದಲನೆಯದು ಮಾನವನ

ಜೀವನಕ್ಕೆ ಸಂಬಂಧಪಟ್ಟುದು: "ಮದ್ಯವು ವಿಷವಾಗಿರುವುದು. ಅದನ್ನು ತಯಾರಿಸಕೂಡದು, ಕೊಡಕೂಡದು, ಕುಡಿಯಕೂಡದು" ಈ ಮಾತಿಗೆ ಇನ್ನಷ್ಟು ಶಕ್ತಿ ಒದಗಿಸುವುದಕ್ಕೆ ಗುರುಗಳು ಬಳಸಿಕೊಂಡ ಮುಂದಿನ ಸಾಲು ತುಂಬ ಸಾಂಕೇತಿಕವಾಗಿದೆ. "ಮೂರ್ತೆದಾರನ ದೇಹ ವಾಸನೆ ಬಟ್ಟೆ ವಾಸನೆ; ಮನೆ ವಾಸನೆ, ಅವನು ಮುಟ್ಟಿದ್ದೆಲ್ಲಾ ವಾಸನೆ."

'ಈಳವ ಸಮುದಾಯದ ಕುಲವೃತ್ತಿ ಎಂಬುದಾಗಿ ಕರೆಯಲಾದ ಸೇಂದಿ ಇಳಿಸುವ ಕಾಯಕಕ್ಕೆ ಗುರುಗಳು ಕೊಡಲಿಯೇಟು ನೀಡಿದ್ದಾರೆ' ಎಂದು ಅನೇಕ ಭಕ್ತಾದಿಗಳಿಗೆ ಅನ್ನಿಸ ಹೋದರೆ ಅದರಲ್ಲಿ ಆಶ್ಚರ್ಯವಿಲ್ಲ ಶುಚಿತ್ವವನ್ನು ತನ್ನ ಮನೆಯಿಂದಲೇ ಪ್ರಾರಂಭಿಸಬೇಕೆಂಬ ಉದ್ದೇಶದಿಂದ ತಾನು ಹುಟ್ಟಿ ಬಂದ ಸಮುದಾಯದ ಮಂದಿಯ ಮೇಲೆ ಈ ಕಟ್ಟುಪಾಡನ್ನು ಹೇರಿದರು. ಹೇಗೆ ಮದ್ಯದ ಅಡಿಯಾಳಾಗಿ ಈಳವ ಸಮುದಾಯ ಉದ್ಧಾರವನ್ನೆ ಕಾಣದೆ ತೊಳಲಾಡುತ್ತಿತ್ತು ಎಂಬುದನ್ನು ಚೆನ್ನಾಗಿ ಅಧ್ಯಯನ ಮಾಡಿ ಅದಕ್ಕೊಂದು ಶಾಶ್ವತ ಪರಿಹಾರವಾಗಿ ಈ ವಾದರೂಪದ ಸಂದೇಶವನ್ನು ಗುರುಗಳು ಸಾರಿದರು.

ಗುರುಗಳ ಎರಡನೆಯ ಸಂದೇಶ ಜಗತ್ಪ್ರಸಿದ್ಧವಾದುದು. ಯಾವ ಕಾಲಕ್ಕೂ ಮಾನವ ಜನಾಂಗಕ್ಕೆ ಅನ್ವಯಿಸುವಂಥಾದ್ದು "ಒಂದು ಜಾತಿ, ಒಂದು ಮತ, ಒಂದು ದೇವರು - ಮನುಷ್ಯರಿಗೆ".

"ಎಲ್ಲ ಮತಗಳ ಉದ್ದೇಶವು ಒಂದೇ ಆಗಿದೆ. ನದಿಗಳು ಸಾಗರ ಸೇರಿದ ಮೇಲೆ ಕಿರುಕಡಲೆಂದೂ ನಡುಕಡಲೆಂದೂ ಭೇದವುಂಟೆ? ಜೀವಾತ್ಮಗಳು ಊರ್ಧ್ವಮುಖಿಗಳಾಗುವಂತೆ ಅಣಿಗೊಳಿಸುವುದಷ್ಟೆ ಮತಗಳು ಮಾಡುವ ಕೆಲಸ. ಅಷ್ಟಾದರೆ ಸಾಕು. ಉಳಿದಂತೆ ಮತಗಳಿಗೆ

ಇನ್ನೇನು ಕೆಲಸ? ಮತಕ್ಕೆ ಮನುಷ್ಯನ ಸಾಕ್ಷಿ ಬೇಕೇ ಹೊರತು ಮನುಷ್ಯನಿಗೆ ಮತದ ಸಾಕ್ಷಿಯ ಅಗತ್ಯವಿಲ್ಲ. ಬೌದ್ಧಮತವನ್ನು ಲಿತಬಳಿಕವೇ ಬುದ್ಧನು ನಿರ್ವಾಣ ಮಾರ್ಗವನ್ನು ಉಪದೇಶಿಸಿದ್ದು? ನಿರ್ವಾಣ ಮಾರ್ಗವನ್ನು ಹುಡುಕುತ್ತ ಹುಡುಕುತ್ತ ಅದನ್ನು ಉಪದೇಶಿಸಿದ. ಕೊನೆಗೆ ಅದು ಬೌದ್ಧಮತವಾಯಿತು. ಅಂದರೆ ಯಾವುದೇ ಮತವು ಮನುಷ್ಯ ನಿರ್ಮಿತವಾಗಿದೆ. ಈ ಮಾತು ವೇದಕ್ಕೂ ಅನ್ವಯಿಸುತ್ತದೆ. ವೇದತತ್ವಗಳು ಅಪೌರುಷೇಯವಾದವುಗಳು. ಅದನ್ನು ರಚಿಸಿದವರು ಯಾರೆಂಬುದು ಸ್ಪಷ್ಟವಿಲ್ಲವೆಂದ ಮಾತ್ರಕ್ಕೆ ವೇದವೇ ಅಪೌರುಷೇಯವೆನ್ನುವುದು ಸಮಂಜಸವಲ್ಲ. ಮತಗಳನ್ನೇ ಅತ್ತಿಹಿಡಿದು ಒಂದು ಇನ್ನೊಂದರೊಡನೆ ಸೆಣಸಾಡತೊಡಗಿದರೆ ಚಿಂತ್ಯವಿಲ್ಲ. ಮತೀಯ ಹೋರಾಟಗಳಿಗೆ ವಿದಾಯಹೇಳಬೇಕಿದ್ದರೆ ಎಲ್ಲರೂ ಎಲ್ಲ ಧರ್ಮಗಳನ್ನೂ ಅರಿತುಕೊಳ್ಳಬೇಕು. ಆಗ ಅವುಗಳೊಳಗಿನ ವ್ಯತ್ಯಾಸ ಅತ್ಯಲ್ಪವೆನ್ನುವುದು ಮನದಟ್ಟಾಗುವುದು. ಹಾಗಾದಾಗ ಮಾತ್ರವೇ ನಾವು ಉದ್ದೇಶಿಸುವ 'ಒಂದು ಮತ' ಎಂಬ ತತ್ವವು ಒಡಲುಗೊಳ್ಳುವುದು.

ಗುರುಗಳು ರಚಿಸಿದ ಮತಮೀಮಾಂಸೆ ಕವಿತೆಯಲ್ಲಿ ಈ ಶಯವನ್ನು ವ್ಯಕ್ತಪಡಿಸಿದ್ದಾರೆ. ಮಾನವ ಸಮುದಾಯವನ್ನು ಒತ್ತರಿಸಿ ರುತ್ತಿರುವ ಮತೀಯ ಭ್ರಾಂತಿಯಿಂದ ರಕ್ಷಿಸುವುದಕ್ಕಿರುವ ಏಕೈಕ ಮಾತ್ರವಾಗಿ 'ಒಂದು ಮತ' ತತ್ವವನ್ನು ಬಳಸಬಹುದೆಂಬುದು ಅವರ ವಾದ.

'ಒಂದು ಮತ' ಎಂದರೆ ಇತರ ಮತಗಳೆಲ್ಲವನ್ನು ವರ್ಜ್ಯಮಾಡಿ ಗುರುಗಳು ನಂಬಿಕೊಂಡು ಬಂದ 'ಸನಾತನ ಮತ' ವನ್ನು ನಂಬಬೇಕೆಂಬ ಅರ್ಥವನ್ನು ಅವರು ಪ್ರತಿಪಾದಿಸುವುದಿಲ್ಲ. 'ಒಂದು ಮತ' ಎಂಬುದು

ಅತ್ಯಂತ ವಿಶಾಲವಾದ ಕಲ್ಪನೆ; ಉದಾರವಾದ ಕಲ್ಪನೆ. ಗುರುಗಳ ಪ್ರಸಿ
ಮಾತಾದ 'ಯಾವುದಾದರೂ ಪರವಾಗಿಲ್ಲ ಮನುಷ್ಯರು ಉದ್ಧಾರವಾದ
ಸಾಕು' ಎಂಬುದು ಅವರು ಪ್ರಚುರ ಪಡಿಸಿದ 'ಒಂದು ಮತ
ಕಲ್ಪನೆಯನ್ನು ಪುಷ್ಟೀಕರಿಸುತ್ತದೆ.

ಕ್ರೈಸ್ತರೂ ಬೌದ್ಧರೂ

ನಾರಾಯಣಗುರುಗಳ ಜನಪ್ರಿಯತೆಯನ್ನು ಕಂಡು ಎ
ಮತಾನುಯಾಯಿಗಳು ಅವರ ಬಳಿ ಬಂದು ಧರ್ಮ ಸೂಕ್ಷ್ಮಗಳನ
ಚರ್ಚಿಸಿ ಹೋಗುತ್ತಿದ್ದರು. ಒಮ್ಮೆ ಓರ್ವ ವಿದೇಶಿ ಪಾದ್ರಿಯೊಬ್ಬರ
ಗುರುಗಳ ಬಳಿಗೆ ಬಂದರು. ಬಹಳ ಹೊತ್ತು ಮತ ಸಂಬಂಧವಾ
ಚರ್ಚೆಗಳನ್ನು ನಡೆಸಿ ಕೊನೆಗೂ ಅವರು ಬಂದ ಉದ್ದೇಶವನ
ತಿಳಿಸಿದರು. ಗುರುಗಳನ್ನು ಕ್ರೈಸ್ತನನ್ನಾಗಿ ಪಲ್ಲಟಿಸುವುದರ ಮೂಲಕ ಕ್ರೈಸ
ಮತಕ್ಕೆ ಕೇರಳದಲ್ಲಿ ವ್ಯಾಪಕವಾದ ನೆಲೆಗಟ್ಟನ್ನು ಕಂಡುಕೊಳ್ಳುವುದ
ಅವರ ಉದ್ದೇಶವಾಗಿತ್ತು. ಗುರುಗಳು ಅವರೊಂದಿಗೆ ಕೆಲ
ಚಿಂತನೆಗಳನ್ನು ಹಂಚಿಕೊಂಡರು: ಪ್ರಾದ್ರಿಗಳನ್ನು ಕುರಿತು.

"ನಿಮ್ಮ ವಯಸ್ಸೆಷ್ಟು?" ಎಂದು ಗುರುಗಳು ಪ್ರಶ್ನಿಸಿದರು.

"ಮೂವತ್ತು"

"ಹಾಗಾದರೆ ನೀವು ಹುಟ್ಟುವುದಕ್ಕಿಂತ ಮೊದಲೇ ನಾನ
ಕ್ರೈಸ್ತನಾಗಿದ್ದೇನೆ. ಕ್ರಿಸ್ತನನ್ನು ನಂಬುವುದಕ್ಕೆ ಪ್ರತ್ಯೇಕವಾದ ವ್ಯವಸ
ಕಾರಣಗಳು ಬೇಕೇನು?" ಗುರುಗಳು ಪ್ರಶ್ನಿಸಿದರು

"ಹೌದು, ಏಸು ಕ್ರಿಸ್ತನು ಮನುಷ್ಯನ ಪಾಪಪರಿಹಾ
ಮಾಡುವುದಕ್ಕೆಂದು ಜನ್ಮ ತಾಳಿದವನೆಂದು ನಂಬಬೇಕು".

"ಅಂದರೆ ಏಸುಕ್ರಿಸ್ತನು ಜನಿಸಿದ ಕೂಡಲೆ ಮನುಷ್ಯರ ಪಾಪ ಪರಿಹಾರವಾಯಿತೆಂದಲ್ಲವೇ ಅದರ ಅರ್ಥ?" ಗುರುಗಳು ತೀಕ್ಷ್ಣವಾಗಿ ಹೀಗೆ ಮಾತನಾಡಿದಾಗಲೆಲ್ಲ ಆ ಪಾದ್ರಿಗಳಿಗೆ ಉತ್ತರಿಸುವುದು ಕಷ್ಟಸಾಧ್ಯವಾಗುತ್ತಿತ್ತು. ಎಳ್ಳಷ್ಟೂ ಏರಿಳಿತಗಳಿಲ್ಲದೆ ಎಲ್ಲ ದೇವರು ಒಂದನ್ನೇ ಹೇಳುತ್ತಿದ್ದಾರೆ ಎಂಬುದನ್ನು ಹೇಳುವುದಕ್ಕೆ ಅವರು ಬಳಸುತ್ತಿದ್ದ ದಾರಿಗಳು ವಿಚಿತ್ರವಾದವುಗಳು.

ಇದೇ ಉದ್ದೇಶವಿರಿಸಿಕೊಂಡು ನಾಲ್ಕು ವಿದೇಶೀ ಪಾದ್ರಿಗಳು ಮತ್ತೊಮ್ಮೆ ಗುರುಗಳನ್ನು ಭೇಟಿ ಮಾಡಿದರು. ಗುರುಗಳು, 'ಎಲ್ಲ ಮತಗಳೂ ಮೂಲಭೂತವಾಗಿ ಒಂದೇ ಆಗಿವೆ. ಮತಾಂತರದಿಂದ ಸಮಸ್ಯೆಗಳು ಪರಿಹಾರವಾಗುವುದಿಲ್ಲ ಎಂಬುದನ್ನು ಅವರಿಗೆ ಅಚ್ಚುಕಟ್ಟಾಗಿ ತಿಳಿಸಿ ಹೇಳಿದರು. ಗುರುಗಳ ಮಾತಿಗೆ ಪಾದ್ರಿಗಳು ತಲೆದೂಗಲೇ ಬೇಕಾಯಿತು.

ಸಿಲೋನ್ ಪ್ರವಾಸ : ಕೊಲಂಬೋದಲ್ಲಿನ ಕೆಲವು ಭಕ್ತರ ಆಮಂತ್ರಣವನ್ನು ಅನುಸರಿಸಿ ಗುರುಗಳು ೧೯೧೮ರಲ್ಲಿ ಸಿಲೋನ್ ಪ್ರವಾಸ ಕೈಗೊಂಡರು. ಮೊತ್ತಮೊದಲಿಗೆ ಕಾಷಾಯ ವಸ್ತ್ರಧಾರಿಗಳಾದದ್ದೂ ಆಗಲೆ. ಶಿಷ್ಯರ ಒತ್ತಾಯಕ್ಕೆ ಕಟ್ಟುಬಿದ್ದು ಕಾಷಾಯಧರಿಸುವಾಗಲೂ ಅವರು, "ಧೂಳು ಅಂಟಿಕೊಂಡರೆ ಗೊತ್ತಾಗದಿರಲೆಂದು ಅಲ್ಲವೆ"? ಎನ್ನುತ್ತಲೇ ಧರಿಸಿದರು. 'ಕಾವಿ ಧರಿಸಿದರೆ ಮಾತ್ರ ಸನ್ಯಾಸಿ' ಎಂಬ ಅಭಿಪ್ರಾಯಕ್ಕೆ ಅವರ ವಿರೋಧವಿತ್ತು. ಆ ನಿಮಿತ್ತವಾಗಿಯೇ ತನ್ನ ಅರವತ್ತನಾಲ್ಕನೆಯ ವಯಸ್ಸಿನವರೆಗೆ ಕಾವಿ ಧರಿಸಲಿಲ್ಲ.

ಸಿಲೋನಿನ ವಿವಿಧ ಧಾರ್ಮಿಕ ಕ್ಷೇತ್ರಗಳನ್ನು ಗುರುಗಳು ಸಂದರ್ಶಿಸಿದರು. ಹಿಂದೂ ದೇವಾಲಯಗಳಲ್ಲಿ ವಸತಿ

ಕಲ್ಪಿಸಲಾಗುತ್ತಿತ್ತಾದರೂ ಎಲ್ಲ ಮತಗಳ ದೇವಾಲಯಗಳನ್ನೂ ಧಾರ್ಮಿಕ ಕೇಂದ್ರಗಳನ್ನೂ ಅವರು ಸಂದರ್ಶಿಸುತ್ತಿದ್ದರು. ಒಮ್ಮೆ ಓರ್ವ ಬೌದ್ಧ ಮತಾನುಯಾಯಿಯೊಂದಿಗೆ ಮಾತನಾಡುತ್ತ ಗುರುಗಳ "ನಾವೂ ಬೌದ್ಧಮತಸ್ಥರೆ" ಅಂದರು. ತನ್ನನ್ನು ಗೇಲಿಮಾಡುವುದಕ್ಕೆ ಗುರುಗಳು ಹಾಗೆಂದರೊ ಎಂಬ ಸಂದೇಹದೊಂದಿಗೆ "ಹೇಗೆ?" ಎಂದು ಅವರು ಪ್ರಶ್ನಿಸಿದರು. "ನಾನು ಅದ್ವೈತವನ್ನು ನಂಬುವಾತ. ನಮ್ಮ ಮತ ನಿಮ್ಮ ಮತ ಎಂಬುದಾಗಿ ಎರಡೆರಡಿಲ್ಲ. ಆದ್ದರಿಂದಲೇ ನಮ್ಮದು ಬೌದ್ಧಮತವೆಂದುದು", ಎಂದರು ಗುರುಗಳು.

ಎರಡನೆಯ ಬಾರಿ ೧೯೨೬ರಲ್ಲಿ ಗುರುಗಳು ಸಿಲೋನಿಗೆ ಹೋಗಬೇಕಾದ ಪ್ರಮೇಯ ಒದಗಿಬಂತು. ಶಿವಗಿರಿಯಲ್ಲಿ ತಾನು ವಾಸಿಸುತ್ತಿದ್ದ ಆಶ್ರಮದಲ್ಲಿ ತನಗಿಂತ ಬಲಿಷ್ಠವಾಗಿ ಇತರ ಶಕ್ತಿಗಳು ಮೇಲೇಳ ತೊಡಗಿದ್ದು ನಿಮಿತ್ತವಾಗಿಯೇ ಇರಬೇಕು. ಗುರುಗಳು ತಮಿಳ್ನಾಡಿಗೆ ಹೊರಟು ಹೋದರು. ಅಲ್ಲಿಂದ ರಾಮೇಶ್ವರಕ್ಕೆ ಹೊರಟು ನಿಂತರು. ಒಂದಿಷ್ಟು ದಿನ ಅಲ್ಲೇ ಕಳೆಯಬೇಕೆಂದು ನಿರ್ಧರಿಸಿದ್ದರು. ರಾಮೇಶ್ವರ ಕ್ಷೇತ್ರಕ್ಕೆ ತಲುಪುತ್ತಿದ್ದಂತೆಯೆ ಸವರ್ಣೀಯರು, ಗುರುಗಳು ಕ್ಷೇತ್ರದಲ್ಲಿ ವಾಸ್ತವ್ಯ ಹೂಡದಂತೆ ಮಸಲತ್ತು ನಡೆಸಿದರು. ಒಂದು ಕ್ಷಣವೂ ಅಲ್ಲಿ ನಿಲ್ಲಬಾರದೆಂದು ನಿಶ್ಚೈಸಿದ ಗುರುಗಳು, ಕೊಲಂಬೊದಿಂದ ಆದಾಗಲೇ ಬಂದಿದ್ದ ಆಮಂತ್ರಣವನ್ನು ಸ್ವೀಕರಿಸಿ ಹೊರಟು ನಿಂತರು.

ಕೊಲಂಬೊ ತಲುಪುವ ವಾರ್ತೆ ಹರಡುತ್ತಲೆ ಅನೇಕ ಸಂಖ್ಯೆಯಲ್ಲಿ ಭಕ್ತಾದಿಗಳು ಗುರುಗಳ ಭೇಟಿಗೆಂದು ನೆರೆಯತೊಡಗಿದ್ದರು. ಅಲ್ಲಿ ನೆಲೆಸಿದ್ದ ಕೇರಳೀಯರು, ತಮಿಳರು ಹಾಗೂ ಹಿಂದೂ, ಮುಸ್ಲಿಂ, ಕ್ರೈಸ್ತ ಬೌದ್ಧ ಬಾಂಧವರು ಅಪಾರ

ಸಂಖ್ಯೆಯಲ್ಲಿ ಗುರುಗಳನ್ನು ಭೇಟಿಮಾಡಿದರು. ಅನೇಕರು ಗುರುಗಳ ಶಿಷ್ಯತ್ವವನ್ನು ಸ್ವೀಕರಿಸಲೂ ಕಾತರರಾಗಿದ್ದರು.

ಅಲ್ಲಿಯ ಬೌದ್ಧಮತಕ್ಕೆ ಸಂಬಂಧಪಟ್ಟ ದೇವಾಲಯಗಳನ್ನು ಕಾಣುವ ಸಲುವಾಗಿ ಒಮ್ಮೆ ಗುರುಗಳು ಶಿಷ್ಯರೊಂದಿಗೆ ಹೊರಟರು. ಒಂದು ಸುಂದರವಾದ ತೋಟದ ನಡುವಣ ಕಟ್ಟಡ ಒಳಪ್ರವೇಶಿಸಿದಾಗ ಕಟ್ಟಡ ಸಂರಕ್ಷಕನು ಅಲ್ಲಿನ ಪ್ರತಿಯೊಂದು ಚಿತ್ರಗಳ ಬಗ್ಗೆ ವಿವರಣೆ ಕೊಡುತ್ತ ಹೋದ -

ಸಂರಕ್ಷಕ : ಇದು ಬುದ್ಧದೇವರು ಮುಂಡನ ಮಾಡಿಸಿಕೊಳ್ಳುತ್ತಿರುವುದು.

ಗುರುಗಳು : ಇದು ಯಾರು?

ಸಂರಕ್ಷಕ : ಇಂದ್ರ

ಗುರುಗಳು : ಇರಬಹುದು, ಈಗ ಗೊತ್ತಾಗೋದು ಹೇಗೆ? ಇದಾರು?

ಸಂರಕ್ಷಕ : ಬ್ರಹ್ಮ ಬುದ್ಧನಿಗೆ ಕಾಷಾಯವನ್ನೀಯುತ್ತಿರುವದು.

ಗುರುಗಳು : ಜನಿವಾರವಿದೆಯಲ್ಲ! ಇದೇನಿದು?

ಸಂರಕ್ಷಕ : ನೈವೇದ್ಯವನ್ನಿಡುವ ಜಾಗ.

ಗುರುಗಳು : ಯಾವ ನೈವೇದ್ಯ?

ಸಂರಕ್ಷಕ : ಆಹಾರ, ಹಣ್ಣುಹಂಪಲು ಇತ್ಯಾದಿ ಪನ್ನೀರಿನಿಂದ ಬುದ್ಧನಿಗೆ ಅಭಿಷೇಕ ಮಾಡುತ್ತೇವೆ.

ಅಲ್ಲಿಯ ಬೌದ್ಧ ಭಿಕ್ಷುಗಳ ಕೆಲವು ವಿಗ್ರಹಗಳನ್ನು ಅವಲೋಕಿಸಿ ಮುಂದೆ ಭಿಕ್ಷುಗಳು ವಾಸಿಸುವ ತಾಣಕ್ಕೆ ಹೋಗುತ್ತಾರೆ. ಎಲೆ ಅಡಿಕೆ

ಜಗಿಯುತ್ತ, ಪೀಕದಾನಿಯಲ್ಲಿ ಉಗುಳುತ್ತ, ಕುಳಿತ ಭಿಕ್ಷುಗಳನ್ನು ಕಂಡಾಗ ಭಾರತದಲ್ಲೂ ಕೂಡ ಹೀಗೇನೆ, ಶುಚಿತ್ವದ ಕಡೆಗೆ ಗಮನವಿಲ್ಲ ಎಂಬ ಉದ್ಗಾರ ಅವರ ಬಾಯಿಂದ ಬಂತು.

ಎಲ್ಲಕ್ಕಿಂತ ಹೆಚ್ಚಾಗಿ ಗುರುಗಳು ಅಲ್ಲಿಂದ ಹೊರಡುವಾಗ ಹೇಳಿದ ಮಾತು ಗಮನಾರ್ಹ. "ಬೌದ್ಧಮತ ಗ್ರಂಥಗಳ ಕೆಲವು ಭಾಗಗಳನ್ನಾದರೂ ಬ್ರಾಹ್ಮಣರು ಬರೆದು ಕೊಟ್ಟಿರಬಹುದೆಂಬುದು ನಮ್ಮ ಅಭಿಪ್ರಾಯ."

ಬ್ರಾಹ್ಮಣರು ಧರ್ಮಗ್ರಂಥಗಳಲ್ಲಿ ಕೈಯಾಡಿಸುವಾಗ ತಮಗೆ ಬೇಕಾದ ಅಂಶಗಳನ್ನು ಹೇಗೆ ಅಳವಡಿಸಿಕೊಳ್ಳುತ್ತಾರೆ ಎಂಬ ಸೂಕ್ಷ್ಮಗಳನ್ನು ಗುರುಗಳು ಗಮನಿಸಿದ್ದಾರೆ. ಹಿಂದೂಮತ ಗ್ರಂಥಗಳಷ್ಟೇ ಅಲ್ಲ, ಬೌದ್ಧಮತ ಗ್ರಂಥಗಳ ಮೇಲೂ ಸ್ವಾಧೀನ ಸ್ಥಾಪಿಸುವ ಪ್ರಯತ್ನವನ್ನು ಬ್ರಾಹ್ಮಣರು ಪಟ್ಟಿರಬಹುದಾದ ಹೊಳಹುಗಳು ಗುರುಗಳ ಮಾತಿನಿಂದ ವೇದ್ಯವಾಗುತ್ತದೆ.

ಸರ್ವ ಧರ್ಮ ಸಮ್ಮೇಳನ :

ವಿವಿಧ ಮತಾನುಯಾಯಿಗಳು ತಮ್ಮ ತಮ್ಮ ಧರ್ಮದೊಳಗಿನ ಸೂಕ್ಷ್ಮಗಳನ್ನು ಒಂದು ವೇದಿಕೆಯಲ್ಲಿ ಬಹಿರಂಗ ಪಡಿಸಿದರೆ ಅವೆಲ್ಲವುಗಳ ಅಂತರಾಳದಲ್ಲಿ ಹುದುಗಿರುವ ಮೂಲ ಆಶಯವನ್ನು ಎಲ್ಲರೂ ಮನದಟ್ಟುಮಾಡುವುದು ಸಾಧ್ಯ. ಚಿಕಾಗೋದಲ್ಲಿ ನಡೆದ ಸರ್ವಧರ್ಮ ಸಮ್ಮೇಳನದಂತಹ ಸಮ್ಮೇಳನವೊಂದನ್ನು ಭಾರತದಲ್ಲಿಯೂ ಜರುಗಿಸಬೇಕೆಂಬ ಅವರ ಇರಾದೆ ೧೯೨೪ರಲ್ಲಿ ಕೈಗೂಡಿತು.

ಯಾವ ಧರ್ಮದಲ್ಲಿ ಏನು ಸೂಕ್ಷ್ಮಗಳು ಹುದುಗಿವೆಯೆಂಬುದರ ಬಗ್ಗೆ ಪರಸ್ಪರ ಅರಿವಿಲ್ಲದಿರುವಿಕೆಯಿಂದ ಕೋಮು ಸೌಹಾರ್ದ ಕೆಟ್ಟು

ಹೋಗುವುದು, ಮತಾಂತರ ಮುಂತಾದ ಪ್ರಶ್ನೆಗಳೇಳುವವು ಎಂಬುದನ್ನು ಎಲ್ಲಮತಗಳೂ ಒಂದೇ ಎಂಬುದನ್ನೂ ಪ್ರಕಟಪಡಿಸುವುದಕ್ಕೆ ಅದೊಂದು ಸುವರ್ಣಾವಕಾಶವಾಗಿತ್ತು.

ಎರಡು ದಿನಗಳ ಸಮ್ಮೇಳನ ಕೇರಳದ ಆಲೂವಾಯಿಯಲ್ಲಿ ನಡೆಯಿತು. ಅವರಿಗೆ ಬೆನ್ನೆಲುಬಾಗಿ ಸಹೋದರನ್ ಅಯ್ಯಪ್ಪನ್ ಸಿ.ವಿ.ಕುಞ್ಞಿ ರಾಮನ್, ಟಿ.ಕೆ.ಮಾಧವನ್ ಮುಂತಾದವರು ನಿಂತರು. "ವಾದಿಸಿ ಗೆಲ್ಲುವುದಕ್ಕಲ್ಲ ತಿಳಿಯುವುದಕ್ಕೆ'' ಎಂಬ ಘೋಷಣೆಯನ್ನು ಭಿತ್ತಿಗಳಲ್ಲಿ ಬರೆದಿಡಲಾಯಿತು.

ಸರ್.ಟಿ.ಸದಾಶಿವಯ್ಯರ್‌ರ ಅಧ್ಯಕ್ಷತೆಯಲ್ಲಿ ಸಮ್ಮೇಳನ ನಡೆಯಿತು. ಆರ್ಯ ಸಮಾಜ, ಬ್ರಹ್ಮ ಸಮಾಜ, ಇಸ್ಲಾಂ ಮತ, ಕ್ರೈಸ್ತ ಮತ, ಬೌದ್ಧಮತ ಹಿಂದೂಮತದ ಪ್ರತಿನಿಧಿಗಳು ವೇದಿಕೆಯನ್ನಲಂಕರಿಸಿದರು. ಚಿಕಾಗೋದ ಸರ್ವಧರ್ಮ ಸಮ್ಮೇಳನದ ಹಾಗೇ ಜಗತ್ತನ್ನು ಆಕರ್ಷಿಸದಿದ್ದರೂ ಭಾರತದಲ್ಲಿ ಮುಂದೆ ಇಂತಹ ಸಮಾಲೋಚನೆ ನಡೆಯುವದಕ್ಕೆ ಇದು ನಾಂದಿಯಾಯಿತು. ಅಂದು ಗುರುಗಳು ಹೇಳಿದ ಮಾತುಗಳು ಮನನೀಯ. 'ಎಲ್ಲ ಮತಗಳ ಪರಮೋದ್ದೇಶ ಒಂದೇ ಆಗಿದೆ' ಪರಸ್ಪರ ಕಲಹದಲ್ಲಿ ತೊಡಗಬೇಕಾದ ಯಾವುದೇ ಕಾರಣವಿಲ್ಲ. ಈ ಸಮ್ಮೇಳನದಿಂದ ಪ್ರೇರಿತರಾಗಿ ಶಿವಗಿರಿಯಲ್ಲಿ ಎಲ್ಲ ಮತಗಳನ್ನೂ ಕಲಿಸುವುದಕ್ಕೋಸ್ಕರ ಒಂದು ಮಹಾಪಾಠಶಾಲೆಯನ್ನು ತೆರೆಯುವದಕ್ಕೆ ತೀರ್ಮಾನಿಸಿದ್ದೇವೆ. ಸಾರ್ವಜನಿಕರ ಪ್ರತ್ಯೇಕ ದೇಣಿಗೆಯಿಂದಲೇ ಈ ಪಾಠಶಾಲೆಯನ್ನು ತೆರೆಯಲಾಗುವುದು.

ಇಂತಹ ಪಾಠಶಾಲೆಯನ್ನು ತೆರೆಯುವಾಗ ಎಲ್ಲರೂ ಭಾಗಿಗಳಾಗುವುದು ಮುಖ್ಯ ಎಂಬ ಉದ್ದೇಶದಿಂದಲೇ ಬಹಿರಂಗ

ದೇಣಿಗೆಯ ಪ್ರಸ್ತಾಪವನ್ನು ಗುರುಗಳು ಸಾರ್ವಜನಿಕವಾಗಿ ಎತ್ತಿದ ಸರ್ವಧರ್ಮ ಸಮ್ಮೇಳನದ ಹೆಸರಿನಲ್ಲಿ. ಧರ್ಮಗಳು ತಮ್ಮೊಳಗೆ ಚ ನಡೆಸುವುದು ಸಾಧ್ಯವಾಗುವುದು ಗುರುಗಳ ಮಹಾತ್ವಾಕಾಂಕ್ಷೆಯಾಗಿತ ಅವರ ದೂರಾಲೋಚನೆ, ಜೀವನದರ್ಶನದ ಒಳತೋಟಿಗಳು ಅದರಿ ವ್ಯಕ್ತವಾಗುತ್ತವೆ.

ವೈಕಂನಲ್ಲಿ ನಡೆದ ಸತ್ಯಾಗ್ರಹ:

ಕೇರಳದ ವೈಕಂನ ಪ್ರಧಾನ ರಸ್ತೆಯೊಂದರಲ್ಲಿ ೧೯೨೧ರ ಕಾ 'ಅವರ್ಣೀಯರಿಗೆ ಪ್ರವೇಶವಿಲ್ಲ' ಎಂಬ ಫಲಕವೊಂದ ಇರಿಸಲಾಗಿತ್ತು. ಗುರುಗಳ ಶಿಷ್ಯರಾದ ಸಹೋದರನ ಸತ್ಯವ್ರತಸ್ವಾ ಹಾಗೂ ಟಿ.ಕೆ. ಮಾಧವನ್ ಮುಂತಾದವರು ದೃಢಸಂಕಲ್ಪ ಮಾಡಿ ರಸ್ತೆಯಲ್ಲಿ ನಡೆದು ಹೋಗುವುದಾಗಿ ತೀರ್ಮಾನಿಸಿ ಅಂತೆಯ ಮಾಡಿದರು. ಆದಕ್ಕೆ ಪ್ರತಿರೋಧ ವ್ಯಕ್ತಪಡಿಸಲು ಯಾರಿಗೂ ಧೈಯ ಬರಲಿಲ್ಲ. ದೇವಸ್ಥಾನಗಳ ಪರಿಸರಗಳಲ್ಲಿ ಈ ರೀತಿಯ ಫಲಕಗ ಸಾಮಾನ್ಯವಾಗಿತ್ತು. ಎಸ್.ಎನ್.ಡಿ. ಪಿ. ಯ ನೇತೃತ್ವದಲ್ಲಿ ಅಂ ಅನೇಕ ಸವಾಲುಗಳನ್ನು ಶಕ್ತವಾಗಿ ಎದುರಿಸಲಾಯಿತು.

'ದಕ್ಷಿಣಕಾಶಿ' ಎಂದೇ ಪ್ರಸಿದ್ಧವಾಗಿರುವ ವೈಕಂ ದೇವಾಲಯದ ಸುತ್ತಲಿದ್ದ ರಸ್ತೆಗಳಲ್ಲಿ ಅವರ್ಣೀಯರಿಗೆ ಪ್ರವೇ ನಿಷೇಧಿಸಲಾಗಿದೆ. ಎಂಬುದಾಗಿ ಫಲಕಗಳಲ್ಲಿ ಬರೆದಿರಿಸಲಾಗಿತ್ತು. ಆದ ಮುಸಲ್ಮಾನರೂ ಕ್ರೈಸ್ತರೂ ಯಾವ ತಡೆಯೂ ಇಲ್ಲದೆ ಆ ದಾರಿಯಾ ಸಂಚರಿಸಬಹುದಾಗಿತ್ತು. ಈ ತೆರನಾದ ಎಗ್ಗಿಲ್ಲದ ತೀರ್ಮಾನಗಳನ ಸರಕಾರದ ಗಮನಕ್ಕೆ ಕುಮಾರನ್ ಆಶಾನ್ ಮೊದಲಾದವ ಅನೇಕಬಾರಿ ತಂದರೂ ಯಾವ ಪ್ರಯೋಜನವೂ ಆಗಲಿಲ್ಲ. ಇಂತ ಪರಿಸ್ಥಿತಿಯಲ್ಲಿ ವೈಕಂನಲ್ಲಿ ಜಾತೀಯತೆ ನಿರ್ಮೂಲನಾ ಕಮಿಟಿಯೊಂದ

ಸ್ತಿತ್ವಕ್ಕೆ ಬಂತು. ಸಾರ್ವಜನಿಕರಿಗೆ ಕರಪತ್ರಗಳ ಮೂಲಕ ವಿಷಯವನ್ನು ಶದಪಡಿಸಿಕೊಡಲಾಯಿತು. ಟಿ.ಕೆ. ಮಾಧವನ್ ನೇತೃತ್ವದಲ್ಲಿ ತ್ಯಾಗ್ರಹ ನಡೆಯಿತು. ಇಂಡಿಯನ್ ನೇಶನಲ್ ಕಾಂಗ್ರೇಸ್ ಸತ್ಯಾಗ್ರಹದ ಂಚೂಣಿಯಲ್ಲಿತ್ತು. ಸತ್ಯಾಗ್ರಹ ನಡೆಯುತ್ತಿದ್ದಂತೆಯೇ ಅದು ತನಕ ರೆಯ ಮರೆಯ ಶಕ್ತಿಯಾಗಿದ್ದ ಗುರುಗಳು ಸೆಪ್ಟಂಬರ್ ೨೭ರಂದು ತ್ಯಾಗ್ರಹ ನಡೆಯುವ ತಾಣಕ್ಕೆ ಬಂದು ಸೇರಿದರು. ಕೆಲದಿನಗಳ ತನಕ ಲ್ಲಿಯೇ ತಂಗಿ ಅಲ್ಲಿನ ಸಮಸ್ತ ಏರ್ಪಾಡುಗಳನ್ನೂ ಪರಿಶೀಲಿಸಿದರು. ಹಾತ್ಮಾ ಗಾಂಧೀಯವರೂ ಗುರುಗಳೂ ಏಕಕಾಲದಲ್ಲಿಯೇ ವೈಕಂ ತ್ಯಾಗ್ರಹದ ಬಗ್ಗೆ ಅಸಕ್ತಿ ತೋರಿಸಿದ್ದರು. ಶಿವಗಿರಿಯಲ್ಲಿ ಭಂಡಾರವನ್ನು ಪಿಸಿ ಸನ್ಯಾಸಿಗಳ ಮೂಲಕ ಮನೆಮನೆಯಿಂದ ಹಣ ಸಂಗ್ರಹಿಸಿ ವೈಕಂ ತ್ಯಾಗ್ರಹಕ್ಕೆ ಕಳಿಸಿಕೊಟ್ಟರು.

ಜಾತೀಯತೆಯನ್ನು ನಿರ್ಮೂಲನ ಮಾಡುವುದಕ್ಕೆ ಯಾವೆಲ್ಲ ಾರ್ಗಗಳಿವೆಯೆಂದು ಸದಾ ಚಿಕಿತ್ಸಕ ದೃಷ್ಟಿಯಿರಿಸಿ ನೋಡುತ್ತಿದ್ದ ರಾಯಣ ಗುರು ಸತ್ಯಾಗ್ರಹದಂತಹ ಮಾರ್ಗದಲ್ಲೂ ಸಾಮಾಜಿಕ ೋಗ ನಿರ್ಮೂಲನ ಶಕ್ತಿಯಿದೆಯೆಂದು ಕಂಡುಕೊಂಡುದು ಆ ಕಾಲಕ್ಕೆ ೋಗ್ಯವಾದುದೇ ಆಗಿತ್ತು.

ಅಧ್ಯಾಯ ೬

ನಾರಾಯಣಗುರು ವ್ಯಕ್ತಿತ್ವ ದರ್ಶನ

ಗುರುಗಳ ಬದುಕು ಯಾವುದಕ್ಕೆ ಮೀಸಗಿರಿಸಲಾದುದೆಂಬುದನ
ವಿವಿಧ ಚಟುವಟಿಕೆಗಳ ಮೂಲಕ ತೋರಿಸಿಕೊಟ್ಟಿದ್ದಾರೆ. ಕೆಲವೊವೆ
ತಮ್ಮ ಕಣ್ಣೆದುರಿನಲ್ಲೇ ನಡೆಯುತ್ತಿದ್ದ ಅನ್ಯಾಯವನ್ನು ಕಂಡ
ಸಹಿಸಲಾಗದ ಸ್ಥಿತಿಗೆ ಅವರು ತಲುಪಿದ್ದಿದೆ. ಆಗ ಹರಿತವಾದ ಆದ
ಎಚ್ಚರಿಕೆಯಿಂದ ಕೂಡಿದ ಮಾತುಗಳು ಅವರ ಬಾಯಿಯಿಂ
ಹೊಮ್ಮಿದ್ದಿದೆ.

ಹೋರಾಟದ ಆಶಯ ಯಾವುದೇ ಇರಲಿ, ಅದನ
ಈಡೇರಿಸುವ ಸಂದರ್ಭದಲ್ಲಿ ಒದಗಿಬರುವ ಸಂಕಷ್ಟಗಳನ
ಎದುರಿಸಬೇಕು, ಹೊಡೆದರೆ ತಿನ್ನಬೇಕು; ತಿರುಗಿ ಹೊಡೆಯಕೂಡದದ
ನಮ್ಮ ದಾರಿಯ ಅಡ್ಡಕ್ಕೆ ಬೇಲಿ ಕಟ್ಟಿದರೆ ಬೇಲಿಯನ್ನು ಹಾ
ಹೋಗಬೇಕು. ಅವರ್ಣೀಯರಿಗೆ ಪ್ರವೇಶವಿಲ್ಲವೆಂಬ ಫಲಕಹೊ

ರಸ್ತೆಗಳಲ್ಲಿ ನಡೆದರೆ ಸಾಲದು, ದೇವಾಲಯಗಳಿಗೆ ಪ್ರವೇಶಿಸಬೇಕು. ಒಂದೋ ಎರಡೋ ದೇವಾಲಯಗಳಿಗೆ ಎಲ್ಲರೂ ಪ್ರವೇಶಿಸಿದರೆ ಸಾಲದು, ಎಲ್ಲ ದೇವಾಲಯಗಳನ್ನು ಪ್ರವೇಶಿಸಬೇಕು. ಎಲ್ಲರೂ ಪ್ರವೇಶಿಸಬೇಕು. ಪಾಯಸ ಮಾಡಿಟ್ಟರೆ ಹೋಗಿ ಹೊಯ್ದು ಕುಡಿಯಬೇಕು. ಊಟಕ್ಕೆ ಕುಳಿತಿದ್ದರೆ ನಡುವೆ ಕುಳಿತು ಉಣ್ಣಬೇಕು. ಎಲ್ಲೆಲ್ಲಿ ಏನೇನು ನಡೆಯುತ್ತವೆ ಎಂಬ ವಿವರವನ್ನು ಆಗಿಂದಾಗ ಸರಕಾರಕ್ಕೆ ತಿಳಿಸುತ್ತಿರಬೇಕು. ಸಾಯುವದಕ್ಕೂ ಹಿಂಜರಿಯಬಾರದು.

''ಮನುಷ್ಯರನ್ನು ಮುಟ್ಟಿದರೆ ಮನುಷ್ಯರು ಮೈಲಿಗೆಯಾಗುತ್ತಾರೆಂದು ಭಾವಿಸುವವರಿಗೆ ಯಾವುದನ್ನೂ 'ಶುದ್ಧವಾಗಿ' ಮಾಡುವುದಕ್ಕೆ ಅವಕಾಶ ಕಲ್ಪಿಸಿಕೊಡಕೂಡದು.''

ಗುರುಗಳ ಈ ಮಾತಿನಲ್ಲಿ ಶತಮಾನದ ಅಸ್ಪೃಶ್ಯತೆ, ಮೈಲಿಗೆಗಳ ನೋವು ಮಡುಗಟ್ಟಿರುವುದನ್ನು ಗಮನಿಸಬಹುದು. ಧರ್ಮವನ್ನು ನಿರಾಕರಿಸುವವರನ್ನು ಅಂತೆಯೇ ತರಾಟೆಗೆ ತೆಗೆದುಕೊಳ್ಳಬೇಕೆಂಬ ರೋಷ ಒಂದು ಕಡೆಯಿದ್ದರೂ ಮರುಪಕ್ಷದಲ್ಲಿ ಸಹನೆಯ ಮಿತಿಯನ್ನು ಮೀರದ ಅಚಲ ನಿರ್ಧಾರವೂ ಇದೆ.

''ಈಳವರು ಎಂಬ ಹೆಸರಿನಲ್ಲಿ ಜಾತೀಯತೆಯನ್ನು ಕಂಡುಕೊಳ್ಳುವುದೇಕೆ? ವಾಸ್ತವವಾಗಿ ಅದು ನಾಡಿನ ಹೆಸರಲ್ಲವೆ? ಅಥವಾ ನಾಡಿನ ಹೆಸರೇ ಬೇಕೆಂದಿದ್ದರೆ ಅದೆಷ್ಟೋ ಕಾಲದಿಂದ ಈ ಮಣ್ಣಿನಲ್ಲಿ ವಾಸಿಸುತ್ತಿರುವ ನಾವು 'ಮಲೆಯಾಳಿ' ಎಂಬುದಾಗಿ ಕರೆಯಿಸಿಕೊಳ್ಳುವುದಲ್ಲವೇ ಕ್ಷೇಮಕರ? ಮಲಯಾಳ ನಾಡಿನವನನ್ನು ಮಲಯಾಳಿ ಎನ್ನುವುದೇ ಹೆಚ್ಚು ಸರಿ. ಜಾತಿಯನ್ನು ದೇವರು ಸೃಷ್ಟಿಸಲಿಲ್ಲವಷ್ಟೆ? ಮನುಷ್ಯನ ಕಲ್ಪನೆಯ ಕೂಸಲ್ಲವೇ ಜಾತಿ? ಹಾಗೊಮ್ಮೆ ಜಾತಿ ಬೇಕೆಂದಿದ್ದರೆ ಎಲ್ಲರೂ ಬ್ರಾಹ್ಮಣರಾಗಲಿ. ಶೂದ್ರ

ಇತ್ಯಾದಿ ಹೇಳಿಸಿಕೊಳ್ಳುವುದರ ಮೂಲಕ ಕೆಳಜಾತಿಯವನೆಂದು ಸ್ವಯಂ ಒಪ್ಪಿಕೊಂಡಂತಾಗುವುದಿಲ್ಲವೆ? ಹಾಗಾಗಬಾರದು.''

ಗುರುಗಳು ಜಾತಿಯತೆಯ ಬಗ್ಗೆ ಎಷ್ಟು ನೊಂದುಕೊಂಡಿದ್ದಾರೆ ಎಂಬುದಷ್ಟೇ ಅಲ್ಲದೇ ಭಾಷೆಯ ಮೂಲಕ ಸಮೂಹವನ್ನು ಗುರುತಿಸುವ ಕಲ್ಪನೆಗೆ ಆದ್ಯತೆ ನೀಡಿದ್ದಾರೆ. ಇಂದು ಭಾಷಾವಾರು ಪ್ರಾಂತಗಳು ನೆಲೆಗೊಂಡಿವೆಯಾದರೂ ಜಾತಿಯನ್ನು ಧರ್ಮವನ್ನು ನಾವು ಉಳಿಸಿಕೊಂಡಿದ್ದೇವೆ. ಅದನ್ನಳಿಸಿ ಒಂದೇ ಧರ್ಮದ, ಒಂದೇ ಭಾಷೆಯನ್ನಾಡುವ ಜಾತಿಯುಳ್ಳವರನ್ನು ಕಾಣಬೇಕೆಂಬುದು ಗುರುಗಳ ಮಹಾತ್ವಾಕಾಂಕ್ಷೆಯಾಗಿತ್ತು.

''ಕೆಳಸ್ತರದವರಲ್ಲಿ ಸಾಕಷ್ಟು ಸಂಪತ್ತು ಉಂಟಾಗಬೇಕು. ಅವರಿಗೆ ವಿದ್ಯಾಭ್ಯಾಸ ನೀಡಬೇಕು. ಸವರ್ಣೀಯರಿಗಿಂತ ಯಾವ ಕಾರಣಕ್ಕೂ ಅವರು ಕೆಳಗಿನವರಾಗಬೇಕಿಲ್ಲ. ಮಿಶ್ರಭೋಜನ, ಮಿಶ್ರವಿವಾಹ ಮುಂತಾದವುಗಳು ಹಂತ ಹಂತವಾಗಿ ನಡೆಯುತ್ತಿರಬೇಕು.

''ಇಂದಿನ ದಿನಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಮಿಶ್ರವಿಘಾಹಗಳಾಗುತ್ತಿವೆ. ಮಿಶ್ರವಿವಾಹವನ್ನು ಒಪ್ಪುವ ಮಂದಿ ಸಾಮಾನ್ಯವಾಗಿ ಜಾತಿಯತೆಯ ಕಡೆಗೆ ಮಾನಸಿಕವಾಗಿ ತುಡಿಯುವದಿಲ್ಲ. ಅಂಥ ಸಮೂಹದ ಅಗತ್ಯವನ್ನು ಗುರುಗಳು ಮನಗಂಡಿದ್ದರು. ಮಿಶ್ರಭೋಜನವು ಜಾತಿಯತೆಯನ್ನು ತೊಲಗಿಸುವಲ್ಲಿನ ಒಂದು ಪ್ರಬಲ ಪ್ರಯೋಗ.'' ಮುಖ್ಯವಾಗಿ ನಿಮ್ನವರ್ಗದವರಿಗೆ ಐಶ್ವರ್ಯ, ವಿದ್ಯಾಭ್ಯಾಸ ಇವೆರಡು ಒದಗುವಂತಾದರೆ ಯಾರಮುಂದೆಯೂ ಎದೆ ಸೆಟೆಸಿ ನಿಲ್ಲುವುದಕ್ಕೆ ಸಾಧ್ಯ ಎಂಬುದು ಗುರುಗಳ ದೃಢನಂಬಿಕೆ.

"ಮೂರ್ತಿದಾರಿಕೆ ಎಂಬುದೊಂದು ಮಾಹಾರೋಗ, ಒಂದು ಅಂಗಕ್ಕೆ ಕುಷ್ಠ ರೋಗ ತಗುಲಿದರೆ ಅದು ದೇಹವನ್ನಿಡೀ ಬಾಧಿಸುವಂತೆ, ಕೆಲವರು ಮೂರ್ತೆದಾರಿಕೆ ನಡೆಸುವುದರಿಂದ ಇಡಿಯ ಸಮಾಜವೇ ಕಳಂಕಯುತವಾಗುವುದು" ರೋಗ ಹಿಡಿದ ಅಂಗಾಂಗವನ್ನು ನಾವು ಕೊಚ್ಚಿ ಹಾಕಬೇಕು. ಮೂರ್ತೆದಾರರನ್ನೂ ಸಮುದಾಯದಿಂದ ಹೊರಗಿಡಬೇಕು. ಅವರೊಂದಿಗೆ ಸಂಪರ್ಕವೇ ಇರಕೂಡದು. ಮೂರ್ತೇದಾರರನ್ನು ನಿಲ್ಲಿಸಿದರೆ ಮತ್ತೆ ಶುದ್ಧಿಕರಿಸಿ ಒಳಸೇರಿಸಬೇಕು.

"ಮೂರ್ತೇದಾರರು ನಿರುದ್ಯೋಗಿಗಳಾದರೇ? ಎಂಬ ಪ್ರಶ್ನೆ. ಮೂರ್ತೆದಾರಿಕೆ ಕತ್ತಿಯನ್ನು ನಾಲ್ಕು ತುಂಡುಗಳನ್ನಾಗಿ ಮಾಡಿದರೆ ಒಂದೊಂದರಲ್ಲಿಯೂ ಕ್ಷೌರಿಕನ ಬಾಳು ಹೊಮ್ಮಿಬಂದೀತು. ಮೂರ್ತೇದಾರಿಕೆಯನ್ನು ಬದಿಗಿಟ್ಟು ಬಾಳನ್ನು ಬಳಸಿಕೊಂಡು ಕ್ಷೌರಿಕ ವೃತ್ತಿಯನ್ನವಲಂಬಿಸಿದರೆ ಎಷ್ಟೋ ಮಾನವಾಗಿ ಬದುಕಬಹುದು."

ಮದ್ಯ ಮನುಷ್ಯನನ್ನು ನಿತ್ಯನಿತ್ಯವೂ ಇಂಚಿಂಚಾಗಿ ಕೊಲ್ಲುವ ವಿಷ ಎಂಬುದನ್ನು ಹೇಳುವ ಇನ್ನೊಂದು ರೂಪವಿದು. ಮದ್ಯವನ್ನು ಯಾರು ತಯಾರಿಸುತ್ತಾರೋ ಆ ಮೂಲದಿಂದಲೇ ಅಂದರೆ ಮೂರ್ತೆದಾರರಿಂದಲೇ ಅದರ ಮೂಲೋತ್ಪಾಟನವಾಗಬೇಕು ಎಂಬುದು ಗುರುಗಳ ಹಾರೈಕೆ. ಮೂರ್ತೆದಾರಿಕೆ ಮಾಡುವ ಈಳವ ಜಾತಿಯಿಂದ ಬಂದ ಗುರುಗಳು ಇಡೀ ಜಾತಿಯನ್ನು ಎದುರು ಹಾಕಿಕೊಳ್ಳುವ ಪ್ರಮೇಯ ಬಂದರೂ ಪರವಾಗಿಲ್ಲ; ಸಮಾಜದ ಅನಿಷ್ಟಗಳನ್ನು ಕಿತ್ತೊಗೆಯಬೇಕೆಂಬ ಛಲತೊಟ್ಟು ಆ ಪ್ರಸ್ತಾನಕ್ಕೆ ವಿಶೇಷ ಆದ್ಯತೆ ಕೊಟ್ಟು ಹೋರಾಟ ನಡೆಸಿದರು.

"ಶುಚಿತ್ವ ಅತ್ಯಂತ ಪ್ರಧಾನವಾದುದು. ಎಲ್ಲರೂ ಮುಂಜಾನೆದ್ದು ಸ್ನಾನ ಮಾಡಬೇಕು. ಮನೆ ಮಂದಿಯೆಲ್ಲರೂ ಸ್ನಾನ

ಮಾಡಬೇಕು. ಮನೆಯನ್ನು ಗುಡಿಸಿ ಸಾರಿಸಿ ಸ್ವಚ್ಛಗೊಳಿಸಬೇಕು. ಕಾಯಶುದ್ಧಿ ಸಿದ್ಧಿಸಿದರೆ ಆಹಾರ ಶುದ್ಧಿಯೂ ಭವನ ಶುದ್ಧಿಯೂ ಅದರಿಂದ ಸಿದ್ಧಿಸುವುದು. ಅದು ಸಾಧಿಸಿದರೆ ಮನುಷ್ಯರು ಎಲ್ಲವನ್ನೂ ಸಾಧಿಸಿದಂತೆಯೇ. ಯಾರು ಅದನ್ನು ಒಪ್ಪುವುದಿಲ್ಲವೋ ಅವರನ್ನು ಶುದ್ಧ ಸಮಾಜದಿಂದ ದೂರವಿರಿಸಬೇಕು.''

ದೇವಾಲಯಗಳ ಪರಿಸರ ಅತ್ಯಂತ ಶುಚಿತ್ವದಿಂದ ಕೂಡಿರಬೇಕೆಂದು ಗುರುಗಳು ಯಾವಾಗಲೂ ಹೇಳುವುದುಂಟು. ಸುತ್ತಮುತ್ತ ಸಾಕಷ್ಟು ಗಿಡಮರಗಳು, ಶುದ್ಧವಾಯು, ವಿಶಾಲ ಪರಿಸರ ಪ್ರಾರ್ಥನೆಗೆ ಬರುವ ಭಕ್ತರಿಗೆ ಯೋಗ್ಯವಾದ ಮನೋಭೂಮಿಕೆಯನ್ನು ಸಿದ್ಧಪಡಿಸಿಕೊಡುವಷ್ಟು ಹಸನಾಗಿರಬೇಕು. ಇಲ್ಲದೇ ಹೋದರೆ ದೇವಸ್ಥಾನದ ಇರುವಿಕೆಯಿಂದ ಯಾವ ಪ್ರಯೋಜನವೂ ಇಲ್ಲ. ದೇವಾಲಯಗಳು ನಗರದ ಗೊಂದಲದಿಂದ ದೂರದಲ್ಲಿರಬೇಕೆಂಬ ಅಭಿಪ್ರಾಯ ಬಹಳ ಸೂಕ್ತವಾದುದು. ಆದರೆ ದೇವಾಲಯಗಳಿರುವಡೆಯಲ್ಲಿ ನಗರ ಬೆಳೆಯುತ್ತ ಹೋಗುವುದರಿಂದ ಗಿಡಮರಗಳು ನಷ್ಟವಾಗುತ್ತವೆ. ಪರಿಣಾಮವಾಗಿ ಪ್ರಕೃತಿಯ ಪರಿಸರದಿಂದ ವಂಚಿತವಾದ ದೇವಾಲಯಗಳನ್ನೇ ನಾವಿಂದು ಹೆಚ್ಚಾಗಿ ಕಾಣುತ್ತೇವೆ.

''ಪ್ರಾಣಿ ಹಿಂಸೆ ಸಲ್ಲದು. ಯಾವುದೇ ಬಗೆಯ ಹಿಂಸೆಯಾದರೂ ಅದು ಅಸಹನೀಯ.''

ಒಮ್ಮೆ ಗುರುಗಳು ದೇವಸ್ಥಾನಗಳಲ್ಲಿ ಕೋಳಿ, ಕುರಿಗಳನ್ನು ಬಲಿಕೊಡುವ ಪದ್ಧತಿಯ ಕುರಿತು 'ಕೋಳಿಯನ್ನು ಬಲಿ ಕೊಡುವಾತನ ಮಗನನ್ನು ಬಲಿಕೊಟ್ಟರೆ ಹೇಗೆ?' ಎಂಬುದಾಗಿ ಕೇಳಿದ್ದು ಸ್ವಲ್ಪ ಕ್ರೂರವೆಂಬುದಾಗಿ ತೋರಿದರೂ ಆ ಕುರಿತು ಅವರು ನಡೆಸಿದ ಸಾಮಾ

ಪ್ರಯತ್ನಗಳು ವಿಫಲಗೊಂಡಾಗ ಅನಿವಾರ್ಯವಾಗಿ ಭೇದದ ಮಾತನ್ನವರು ಎತ್ತಿರಬೇಕು.

ನಿಮ್ನ ವರ್ಗದವರನ್ನು ಉದ್ಧರಿಸುವುದಕ್ಕೆ ನಾರಾಯಣ ಗುರುಸ್ವಾಮಿ ತನ್ನ ಸರ್ವಸ್ವವನ್ನು ಧಾರೆಯೆರೆದರು. ಎಲ್ಲ ಮಾನವರನ್ನು ಒಂದು ಸೂತ್ರದಲ್ಲಿ ಬಂಧಿಸುವ ಪ್ರಯತ್ನವನ್ನವರು ತಮ್ಮ ಅಕ್ಷದಲ್ಲಿ ಸಾಧ್ಯವಾಗುವಷ್ಟರ ಮಟ್ಟಿಗೆ ಮಾಡಿ ನೋಡಿದರು. ನಡುವೆ ಕೆಲವು ಪವಾಡಗಳನ್ನು ಎಲ್ಲ ಸಿದ್ಧಯತಿಗಳಂತೆ ಗುರುಗಳೂ ಮಾಡಿದರು. ಪವಾಡ ಎಂದೂ ಅವರನ್ನು ಪ್ರಸಿದ್ಧಿಗೆ ತರಲಿಲ್ಲ. ಪವಾಡಗಳನ್ನವರು. ನಂಬಿಕೊಂಡು ಬಂದಂತೆಯೂ ತೋರಲಿಲ್ಲ. ತನ್ನ ತಂದೆ, ಮಾವ ಮೊದಲಾದವರು ಆ ದಿನಗಳಲ್ಲಿ ಪ್ರಸಿದ್ಧಿ ಪಡೆದ ವೈದ್ಯರಾಗಿದ್ದುದರಿಂದ ಆಯುರ್ವೇದ ಔಷಧಗಳ ಬಗ್ಗೆ ಅವರಿಗೆ ಸಾಕಷ್ಟು ಮಾಹಿತಿಯಿತ್ತು. ಆ ಕಾರಣಕ್ಕೆ ಹಾಗೂ ಶುಚಿತ್ವದ ಪ್ರಾಥಮಿಕ ಪಾಠಗಳನ್ನು ಕಟ್ಟುನಿಟ್ಟಾಗಿ ವಿಧಿಸುತ್ತಿದ್ದುದಕ್ಕೆ ಗುರುಗಳು ಕೊಡುತ್ತಿದ್ದ ಔಷಧಿಗಳು ಪವಾಡ ಸದೃಶವಾಗಿ ಫಲಿಸುತ್ತಿದ್ದವು.

ಅಷ್ಟೊಂದು ದೇವಾಲಯಗಳನ್ನು ಆಶ್ರಮಗಳನ್ನು ನಿರ್ಮಿಸುವುದರ ಉದ್ದೇಶ ಜನರಲ್ಲಿ ದೈವ ಭಕ್ತಿ ಮೂಡಿಸುವುದಷ್ಟೇ ಆಗಿರಲಿಲ್ಲ. ದರ್ಪಣವನ್ನು ಪ್ರತಿಷ್ಠಾಪಿಸುವ, ದೀಪವನ್ನು ತೂಗು ಹಾಕುವ ಕಲ್ಪನೆಗಳೇ ಅದ್ಭುತವಾಗಿವೆ. ದೇವಾಲಯಗಳು ಪ್ರಶಾಂತ ಪರಿಸರದಲ್ಲಿ ಸ್ಥಾಪನೆಗೊಳ್ಳಬೇಕು. ಬದುಕಿನ ಜಂಜಡದ ನಡುವೆ ಜನರ ಮನಸ್ಸಿಗೆ ನೆಮ್ಮದಿ ಸಿಗುವ ತಾಣ ಅದಾಗಿರಬೇಕು ಇತ್ಯಾದಿಗಳು ಅವರ ಆಶಯವಾಗಿದ್ದವು. ದೇವಾಲಯಗಳಲ್ಲಿ ಗ್ರಂಥಾಲಯಗಳು ನಿರ್ಮಾಣಗೊಳ್ಳಬೇಕೆಂಬುದು ವಿನೂತನವಾದ ಕಲ್ಪನೆ. ಮಂದಿಯನ್ನು ವಿದ್ಯಾವಂತರನ್ನಾಗಿ ಮಾಡಬೇಕೆನ್ನುವ ತುಡಿತ ಅವರಲ್ಲಿತ್ತು.

ಲೋಕದ ಎಲ್ಲ ಮತಗಳನ್ನೂ ಅರ್ಥಮಾಡಿಕೊಳ್ಳಬೇಕಾದ ಅಗತ್ಯವನ್ನು ಗುರುಗಳು ಸದಾ ಒತ್ತಿ ಹೇಳುತ್ತಿದ್ದರು. ಯಾವೊಂದು ಮತವು ಇನ್ನೊಂದಕ್ಕಿಂತ ಕೀಳಲ್ಲ ಅಥವಾ ಮೇಲಲ್ಲ, ಜನರು ಅದನ್ನರಿತುಕೊಳ್ಳಲಿ ಎಂಬ ಉದ್ದೇಶದಿಂದಲೇ ಸರ್ವಧರ್ಮ ಸಮ್ಮೇಳನವನ್ನು ಏರ್ಪಡಿಸಿದರು.

ಗುರುಗಳ ಓದು ವಿಶಾಲವಾಗಿತ್ತು. ಸಂಸ್ಕೃತ, ತಮಿಳು, ಮಲಯಾಳಂಗಳಲ್ಲಿ ವಿಶೇಷ ಪಾಂಡಿತ್ಯವಿತ್ತು. ಆ ನಿಮಿತ್ತವಾಗಿಯೋ ಸನ್ಯಾಸಿಗಿರಬಹುದಾದ ಜನ್ಮವಾಸನೆ ನಿಮಿತ್ತವಾಗಿಯೋ, ಅವರ ಮಾತುಗಳಿಗೆ ವಿಶೇಷ ಕಾವು ಇರುತಿತ್ತು.

ಗುರುಗಳು ಎಳವೆಯಿಂದಲೇ ಸನ್ಯಾಸದತ್ತ ಆಕರ್ಷಿತರಾಗುತ್ತ ಬಂದವರು. ಬುದ್ಧ, ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ ಮೊದಲಾದವರ ಜೀವನ ಕ್ರಮವನ್ನು ಅಭ್ಯಾಸಮಾಡಿದರೆ ಸನ್ಯಾಸಿಯ ಬಾಳನ್ನು ಬಾಳುವ ಮನೋಭೂಮಿಕೆ ಅವರಲ್ಲಿ ಎಳವೆಯಿಂದಲೇ ಮೂಡಿಬಂದುದನ್ನು ಗಮನಿಸಬಹುದು.

ಗುರುಗಳು ಅಪಾರ ಶಿಷ್ಯವೃಂದವನ್ನು ಹೊಂದಿದ್ದರು. ಅವರಲ್ಲಿ ಕುಮಾರನ್ ಆಶಾನ್' ಡಾ.ಪಲ್ಪು' ಸ್ವಾಮಿ ಸತ್ಯವ್ರತನ್, ಟಿ.ಕೆ.ಮಾಧವನ್, ನಟರಾಜನ್, ಕೆ.ಅಯ್ಯಪ್ಪನ್ ಮುಂತಾದವರು ಪ್ರಮುಖರು.

ಮಹಾಕವಿ ಕುಮಾರನ್ ಆಶಾನ್ :

ಗುರುಗಳ ಪಾಲಿಗೆ ಕುಮಾರನ್ ಆಶಾನ್ ಓರ್ವ ಮಾನಸ ಪುತ್ರರಿದ್ದಂತೆ. ಮಲಯಾಳ ಸಾಹಿತ್ಯದ ಪುರೋತ್ಥಾನವನ್ನು ಮಾಡಿದ ಕುಮಾರನ್ ಆಶಾನ್ ಗುರುಗಳಿಂದ ಅನುಗ್ರಹಿತರಾದವರು.

ರಮಹಂಸರಿಗೆ ವಿವೇಕಾನಂದರು ಹೇಗೋ ಗುರುಗಳಿಗೆ ಕುಮಾರನ್ ಶಾನ್ ಹಾಗೆ.

ಕುಮಾರನ್ ಆಶಾನ್‌ರನ್ನು ಗುರುಗಳು ಯಾವುದೇ ರೀತಿಯಲ್ಲಿ ಯಂತ್ರಿಸಲಿಲ್ಲ. ಅವರ ಕಾವ್ಯ ಪ್ರತಿಭೆ ಸ್ಫುರಣಗೊಳ್ಳುವುದಕ್ಕೆ ಸಾಕಷ್ಟು ೀರಣೆಯನ್ನು ಕೊಟ್ಟರು. ತಮ್ಮ ಚಿಂತನೆಗಳಿಗೆ ಅಕ್ಷರರೂಪವನ್ನು ಟ್ಟು ಅವನ್ನು ಚಿರಸ್ಥಾಯಿಯಾಗುವುದಕ್ಕೆ ಆಶಾನ್ ಶ್ರಮಿಸಿದರು. ನ್ನ ವರ್ಗವಾದ ಈಳವಜಾತಿಯಲ್ಲಿ ಜನಿಸಿ ಉನ್ನತವರ್ಗದವರಿಂದ ಕಷ್ಟು ಕಿರುಕುಳ ಅನುಭವಿಸಿದರೂ ನಿರ್ವಿಘ್ನವಾಗಿ ಸಾಗಿದ ತನ್ನ ದ್ಯಾಭ್ಯಾಸದಿಂದಾಗಿ ಆಶಾನ್ ಸಾಹಿತ್ಯಸಂಪನ್ನರಾದರು. ಗುರುಗಳ ಪರ್ಕಕ್ಕೆ ಬಂದ ಬಳಿಕ ಆಶಾನ್‌ರಲ್ಲಿ ಸಮಾನತೆ, ಸಾಮಾಜಿಕ ಎಚ್ಚರಿಕೆ ಂತಾದ ಪುರೋಗಾಮಿ ಚಿಂತನೆಗಳು ಗರಿಗೆದರತೊಡಗಿದವು. ಣಪ್ಪೂ, ಸೀತಾ, ದುರವಸ್ಥೆ ಮುಂತಾದ ಕಾವ್ಯಗಳ ಮೂಲಕ ಮಾನವ ಬಂಧಗಳಲ್ಲಿ ಸಮಾನತೆಯ ಅಗತ್ಯವನ್ನವರು ಎತ್ತಿ ಹಿಡಿದರು. .ಪಲ್ಪು ಅವರೊಂದಿಗೆ ಸೇರಿಕೊಂಡು ಗುರುಗಳ ಹೆಸರಿನಲ್ಲಿ ಎಸ್. ನ್.ಡಿ.ಪಿ.ಯೋಗಂ (ಶ್ರೀ ನಾರಾಯಗುರು ಧರ್ಮ ಪರಿಪಾಲನಾ ೋಗಂ) ಎಂಬ ಸಂಘಟನೆಯನ್ನು ಹುಟ್ಟು ಹಾಕಿ ಅದನ್ನು ಭೂತಪೂರ್ವವಾಗಿ ಬೆಳೆಸಿ ನಿಲ್ಲಿಸಿದರು.

ಕೃತಿಗಳ ಸಂಘಟನೆಗಳ ಮೂಲಕವಲ್ಲದೆ ವೈಯುಕ್ತಿಕ ನೆಲೆಯಲ್ಲಿ ವೆಷ್ಟೊ ಬಾರಿ ದಿಟ್ಟ ಹೆಜ್ಜೆಗಳನ್ನಿಟ್ಟು ಸವರ್ಣೀಯರಿಗೆ ನುಂಗಲಾರದ ತ್ತಾಗಿ ಆಶಾನ್‌ರು ಕಾಣಿಸಿಕೊಂಡಿದ್ದಾರೆ. ರಸ್ತೆಗಳಲ್ಲಿ ವರ್ಣೀಯರಿಗೆ ಪ್ರವೇಶ, ದೇವಾಲಯಕ್ಕೆ ಪ್ರವೇಶ, ಮಿಶ್ರಭೋಜನ ತ್ಯಾದಿ ಪ್ರಗತಿಪರ ಕೆಲಸಗಳನ್ನೆಷ್ಟೊ ಮಾಡಿದ್ದಾರೆ.

ಈ ಎಲ್ಲದರ ಹಿಂದೆಯೂ ಗುರುಗಳ ಕಾಣದ ಕೈ ಕೆ
ಮಾಡುತ್ತಿತ್ತು ಎಂಬುದು ಗಮನಾರ್ಹ.

ಟಿ.ಕೆ.ಮಾಧವನ್:

ಕೆಳವರ್ಗದವರ ಮಾತಾಗಬೇಕೆಂಬ ಉದ್ದೇಶದಿ
'ದೇಶಾಭಿಮಾನಿ' ಎಂಬ ಪತ್ರಿಕೆಯನ್ನು ಪ್ರಾರಂಭಿಸಿ(೧೯೧೫)ಶಕ್ತವಾ
ಲೇಖನಗಳನ್ನು ಬರೆಯುತ್ತಾ, ಅವಿದ್ಯಾವಂತ ಮಂದಿಯನ
ಹುರಿದುಂಬಿಸುವುದಕ್ಕಾಗಿ ಭಾಷಣಗಳನ್ನು ಮಾಡುತ್ತಾ ಗುರು
ಶಿಷ್ಯರಲ್ಲಿ ಅಗ್ರಪಂಕ್ತಿಯವರಾಗಿ ಕಾಣಿಸುವವರು ಟಿ.ಕೆ. ಮಾಧವನ
ದೇವಾಲಯಗಳಿಗೆ ಅದರ ಪರಿಸರದ ರಸ್ತೆಗಳಿಗೆ ಹಾಗೂ ಶಾಲೆಗಳ
ಕೂಡ ಪ್ರವೇಶವಿಲ್ಲದ ಕಾಲದಲ್ಲಿ ಮಾಧವನ್ ತನ್ನ ಸ್ವರವನ್ನು ಪತ್ರಿಕೆ
ಮೂಲಕ ತಾರಕಕ್ಕೇರಿಸಿದರು. ಈಳವ ಜಾತಿಯ ವಿದ್ಯಾರ್ಥಿಗಳನ
ಶಾಲೆಗೆ ಸೇರಿಸಲು ಪ್ರಯತ್ನಿಸಿದಾಗ, ಶಾಲೆಯು ದೇವಾಲಯ
ಹತ್ತಿರದಲ್ಲಿರುವುದರಿಂದ ಈಳವರಿಗೆ ಪ್ರವೇಶ ನೀಡಲಾಗುವುದಿಲ್ಲ ಎ
ಉತ್ತರವನ್ನು ಕೊಟ್ಟಾಗ ಅಂಥವುಗಳನ್ನು 'ದೇಶಾಭಿಮಾನಿ' ಪತ್ರಿಕೆಯ
ಪ್ರಕಟಿಸಿ ಖಾರವಾದ ಸಂಪಾದಕೀಯವನ್ನೂ ಅವರು ಬರೆಯುತ್ತಿದ್ದರು

ಈಳವ ಸಮುದಾಯಕ್ಕೆ ಆಗುತ್ತಿದ್ದ ಅನ್ಯಾಯವನ್ನು ಕಂ
ಅನೇಕರು ಬೌದ್ಧ ಮತವನ್ನು ಸ್ವೀಕರಿಸಲು ಉದ್ದೇಶಿಸಿದರು. ಗುರು
ಶಿಷ್ಯರಾದ ಸಹೋದರನ್, ಕುಮಾರನ್ ಆಶಾನ್ ಮೊದಲಾದವರು
ಬಗ್ಗೆ ಒಲವುಳ್ಳವರಾಗಿದ್ದರು. ಆಗ ಮಾಧವನ್ ಶ್ರೇಷ್ಠವಾದ ಹಿಂದ
ಮತವನ್ನು ಉಪೇಕ್ಷೆ ಮಾಡದೆ ಅದರಲ್ಲಿದ್ದುಕೊಂಡೇ ನ
ಬೇಡಿಕೆಗಳನ್ನು ಈಡೇರಿಸಿಕೊಳ್ಳಬೇಕೆಂದರು ಆ ಮೂಲಕ ಈಳವ
ಮತಪರಿವರ್ತನೆಯ ತುಡಿತ ನಿಂತುಹೋಯಿತು.

೧೯೨೧ರಲ್ಲಿ ವೈಕಂ ಎಂಬಲ್ಲಿನ ಪ್ರಧಾನ ರಸ್ತೆಯಲ್ಲಿ ವರ್ಣೀಯರಿಗೆ ಪ್ರವೇಶವಿಲ್ಲವೆಂಬ ಫಲಕವನ್ನು ತೂಗುಹಾಕಿದಾಗ ಆ ರಸ್ತೆಯಲ್ಲಿ ನಡೆದು ಹೋಗುತ್ತೇನೆ. ಬಂದದ್ದು ಬರಲಿ' ಎಂಬುದಾಗಿ ರ್ಧಾರ ತೆಗೆದುಕೊಂಡು ಸಹೋದರನ್ ಹಾಗೂ ತ್ಯವ್ರತಸ್ವಾಮಿಯವರೊಂದಿಗೆ ಜನಸಮೂಹ ನೋಡುತ್ತಿದ್ದಂತೆಯೇ ಡೆದು ಹೋದರು. ಯಾವ ಅಹಿತಕರ ಘಟನೆಯೂ ಸಂಭವಿಸಲಿಲ್ಲ.

ಓರ್ವ ಸಮರ್ಥ ಸಂಘಟನಾ ಚತುರನಾಗಿ, ಎಸ್.ಎನ್.ಡಿ.ಪಿ.ಗೆ ೀವ ನೀಡಿದ ನೇತಾರನಾಗಿ, ಚಳುವಳಿಗಳ ಮುಂಚೂಣಿಯ ಾಯಕನಾಗಿ, ಟಿ.ಕೆ.ಮಾಧವನ್ ಕಾಣಿಸಿಕೊಳ್ಳುತ್ತಾರೆ. ಗುರುಗಳ ಾರ್ಗದರ್ಶನದಂತೆ 'ಸಂಘಟಿತರಾಗಿ' ಬಲಿಷ್ಠರಾಗಿ ಎಂಬ ೋಷಣೆಯನ್ನು ಮೊಳಗಿಸಿ ಆ ಮೂಲಕ ಅವರ್ಣೀಯರಿಗೆ ಸಮರ್ಥ ೇದಿಕೆಯನ್ನೊದಗಿಸಿಕೊಡುವುದು, ಮಾಧವನ್‌ರಿಗೆ ಸಾಧ್ಯವಾಯಿತು. ಾಮಾಜಿಕ, ಆರ್ಥಿಕ ಶೋಷಣೆಗೆ ಗುರಿಯಾದವರನ್ನು ಇಷ್ಟೊಂದು ್ರಮಾಣದಲ್ಲಿ ಮೊತ್ತ ಮೊದಲ ಬಾರಿಗೆ ಎತ್ತಿಕಟ್ಟಿದವರಲ್ಲಿ ..ಕೆ.ಮಾಧವನ್ ಅಗ್ರಮಾನ್ಯರು.

ಹೋದರನ್ ಅಯ್ಯಪ್ಪನ್:

ಬಾಲಕನಾಗಿದ್ದಾಗ ಗುರುಗಳ ಆಶ್ರಮಕ್ಕೆ ಬಂದು ಸೇರಿದ್ದ ಹೋದರನ್ ಅಯ್ಯಪ್ಪನ್, ಕಾರ್ಯಕಾರಣ ಸಂಬಂಧಗಳನ್ನಷ್ಟೆ ಂಬಿಕೊಂಡು ಬಂದವ, ಅಂದರೆ ಆತ ಕಟ್ಟಾ ನಾಸ್ತಿಕನಾಗಿದ್ದ. ುರುಗಳು ಆತನಲ್ಲಿ ಕಂಡುಕೊಂಡದ್ದು ' ಬದಲಾವಣೆಯ ಕಡೆಗೆ ತನಿಗಿದ್ದ ತುಡಿತ. ಜನರ ಮಧ್ಯದಲ್ಲಿ ಮನೆಮಾಡಿದ್ದ ಜಾತಿಯತೆ, ಾತೀಯ ಅಂಧ ವಿಶ್ವಾಸಾದಿಗಳನ್ನು ಬುಡಸಹಿತ ಕಿತ್ತುಹಾಕಬೇಕೆಂಬ ಲವುಳ್ಳ ವ್ಯಕ್ತಿಯಾಗಿ ಅಯ್ಯಪ್ಪನ್ ಗುರುಗಳಿಗೆ ಬೇಕಾದವರಾದರು.

ನಾಸ್ತಿಕವಾದವೂ ಒಂದು ಅಸಾಮಾನ್ಯ ವಾದವೆಂಬುದನ್ನು ಗುರುಗ ಮನಗಂಡಿದ್ದರಿಂದ ಅದರ ಬಗ್ಗೆ ತಿರಸ್ಕಾರವಿರಲಿಲ್ಲ.

ತನ್ನ ಗುರುಗಳ ಬಗ್ಗೆ ಅಚಲ ವಿಶ್ವಾಸವನ್ನು ಹೊಂದಿ ಅಯ್ಯಪ್ಪನ್ ತನಗೆ ವಹಿಸಿಕೊಟ್ಟ 'ಅಂಧ ವಿಶ್ವಾಸಿ'ಗಳ ಮನಸ್ಸ ತೊಳೆಯುವ ಕೆಲಸವನ್ನು ಸಮರ್ಥವಾಗಿ ನಿರ್ವಹಿಸಿದರ ವಿದ್ಯಾಭ್ಯಾಸ, ಆ ಬಳಿಕ ಸ್ವಾತಂತ್ರ್ಯ ಎಂಬ ಅವರ ಘೋಷಣೆ ಮಂ ಬಹು ಆಕರ್ಷಕವಾಗಿ ಪರಿಣಮಿಸಿ, ಅಂದಿನ ಪ್ರಸಿದ್ಧ ಚಿಂತಕರ ವಿ.ಟಿ.ಭಟ್ಟಾದಿರಿಪ್ಪಾಡ್, ಎಂ.ಸಿ.ಜೋಸೆಫ್, ಕೇಶವದೇ ಮೊದಲಾದವರು ಅಯ್ಯಪ್ಪನ್‌ರವರ ಅನುಗಾಮಿಗಳಾದ ಟಿ.ಕೆ.ಮಾದವನ್‌ರ ದೃಷ್ಟಿಕೋನವನ್ನು ಅಯ್ಯಪ್ಪನ್‌ರು ಬೆಂಬಲಿಸಿದರ

ಗುರುಗಳು ತನ್ನ ಶಿಷ್ಯನೊಂದಿಗೆ ಮತಪಲ್ಲಟ ಸಂಬಂಧವ ಚರ್ಚೆ ನಡೆಸಿದ ಸಂದರ್ಭವನ್ನಿಲ್ಲಿ ಉಲ್ಲೇಖಿಸಬಹುದು:

ಗುರು : ಮತಪಲ್ಲಟ ಮಾಡಿಕೊಳ್ಳಬೇಕೆಂದು ಡಾಕ್ಟರ್ (ಪಲ ಹೇಳುತ್ತಿದ್ದಾರಲ್ಲ.

ಸಹೋದರನ್ : ಮತ ಪರಿವರ್ತನೆ ಮಾಡಿಕೊಳ್ಳುವ ಬ ಕೆಲವರಿಗೆಲ್ಲ ಆಸಕ್ತಿಯಿದೆ.

ಗುರು : ಮನುಷ್ಯ ಒಳ್ಳೆಯವನಾದರೆ ಸಾಲದೆ? ಮತಪರಿವತ ಅಂದರೆ ಅದೇ ಅಲ್ವೇ? ಅದರ ಹೊರತಾದ ಪರಿವರ್ತನೆಯ ಬ ಯಾರಾದರೂ ಹೇಳುತ್ತಿದ್ದಾರೆಯೇ?

ಸಹೋದರನ್ : ಮನುಷ್ಯ ಒಳ್ಳೆಯವನಾಗುವು ಬೌದ್ಧಮತದಲ್ಲಿ ಹೆಚ್ಚು ಅವಕಾಶಗಳಿವೆ.

ಗುರು : ಬೌದ್ಧಮತದವರೆಲ್ಲರೂ ಒಳ್ಳೆಯವರೆ?

ಸಹೋದರನ್ : ಈಗಿನವರೆಲ್ಲರೂ ಒಳ್ಳೆಯವರೆಂದು ಹೇಳುವುದು ಅಸಾಧ್ಯ. ಆದರೂ ಮನುಷ್ಯ ಒಳ್ಳೆಯವನಾಗುವುದಕ್ಕೆ ಬುದ್ಧನ ಉಪದೇಶಗಳಷ್ಟು ಒಳ್ಳೆಯ ಉಪದೇಶ ಇನ್ನೊಂದಿಲ್ಲ.

ಗುರು : ಕ್ರಿಸ್ತುವಿನ ಉಪದೇಶ ಚೆನ್ನಾಗಿಲ್ವೆ? ಮಹಮ್ಮದ್ ನಬಿಯ ಉಪದೇಶವೂ ಚೆನ್ನಾಗಿದೆ. ಹಾಗಿರುವಾಗ ಮತಯಾವುದಾದರೂ ಮನುಷ್ಯನಿಗೆ ಒಳ್ಳೆಯವನಾಗಬೇಕೆಂಬ ಪ್ರಯತ್ನ ನಡೆಯುತ್ತಿರಬೇಕು. ನಡೆ, ನುಡಿಗಳೆಲ್ಲ ಅತ್ಯಂತ ಶುದ್ಧವಾಗಿರುವಂತೆ ನೋಡಿಕೊಳ್ಳಬೇಕು.

ಸಹೋದರನ್ : ಇಷ್ಟೊಂದು ಜಾತಿಗಳು.....

ಗುರು : ಜಾತಿ ಮನುಷ್ಯರ ಅಂತರಾಳದಲ್ಲಿ ಬಲಿತು ಬಿಟ್ಟಿದೆ ಈ ದೃಷ್ಟಿಯಲ್ಲಿ ಶಂಕಾಚಾರ್ಯರೂ ತಪ್ಪಿತಸ್ಥರೇ. ಬ್ರಹ್ಮಸೂತ್ರವನ್ನೂ ಗೀತೆಯನ್ನೂ ಬರೆದ ವ್ಯಾಯಸರೇ ಜಾತುರ್ವರ್ಣ್ಯದ ಕುರಿತು ಎರಡು ಕಡೆಗಳಲ್ಲಿ ಎರಡು ಬಗೆಯಾಗಿ ಹೇಳಿದ್ದಾರೆ. ಜಾತಿಯನ್ನು ಕಿತ್ತೊಗೆಯಬೇಕು. ಅನ್ಯಮಾರ್ಗವಿಲ್ಲ. ಮನುಷ್ಯರೆಲ್ಲರೂ ಒಂದೇ ಸಮುದಾಯದವರಲ್ಲವೇ?

ಸಹೋದರನ್; ಮತ ಪಲ್ಲಟದ ಬಗ್ಗೆ ನಿಮ್ಮ ಅಭಿಪ್ರಾಯ?

ಗುರು : ನಮ್ಮ ಅಭಿಪ್ರಾಯ ಇನ್ನೂ ಗೊತ್ತಿಲ್ಲವೇ?

ಸಹೋದರನ್ : ಗೊತ್ತು ಯಾವ ಮತವನ್ನೂ ನೀವು ದ್ವೇಷಿಸುವವರಲ್ಲ. ಮನುಷ್ಯನ ಮತ, ವೇಷ, ಭಾಷೆ ವಿಭಿನ್ನವಾಗಿದ್ದರೂ ಎಲ್ಲರೂ ಒಂದೇ ಸಮುದಾಯದವರಂತೆ ಬದುಕಬೇಕು ಎಂಬ ನಿಮ್ಮ ಅಭಿಪ್ರಾಯ ನಮಗೆ ಚೆನ್ನಾಗಿಗೊತ್ತು. ಯಾರಾದರೂ ಮತ

ಪರಿವರ್ತನೆಗೆ ಬಯಸಿದರೆ, ನೀವು ಅದನ್ನು ವಿರೋಧಿಸುವುದಿಲ್ಲ ಎಂಬುದೂ ಗೊತ್ತು.

ಗುರು : ಖಂಡಿತವಾಗಿ ಯಾರಿಗೆ ಯಾವ ಧರ್ಮ ಇಷ್ಟವೋ ಅದನ್ನು ಸ್ವೀಕರಿಸುವ ಸ್ವಾತಂತ್ರ್ಯವಿದೆಯಲ್ಲವೆ? ಧರ್ಮ ಯಾವುದೇ ಆಗಿರಲಿ ತಂದೆಯ ಧರ್ಮ ಮಗನಿಗೆ ಇಷ್ಟವಾಗಬೇಕೆಂದಿಲ್ಲ. ಆದರೂ ಹಿಂದೂ ಧರ್ಮದಿಂದ ಪಲ್ಲಟಗೊಳ್ಳಬಯಸುವವರು ಆ ಧರ್ಮದಲ್ಲಿ ಯಾವ ಕೊರತೆಯನ್ನು ಕಾಣುತ್ತಾರೆ?

ಸಹೋದರನ್ : ವೇದವಾಗಲೀ ಗೀತೆಯಾಗಲೀ ಪ್ರಾಣಿ ಬಲಿ, ಬಹು ದೇವತಾರಾಧನೆ, ಜಾತಿ ಪದ್ಧತಿಗಳನ್ನು ಉಪದೇಶಿಸುತ್ತದೆ.

ಸ್ವಾಮಿ : ವೇದ ಹಾಗಿದ್ದಿರಬಹುದು. ಆದರೂ ಅದರಲ್ಲಿ ನಡನಡುವೆ ಅನೇಕ ಉಪಯುಕ್ತ ವಿಚಾರಗಳು ಇವೆಯಲ್ಲವೆ? ಮತಸಾಹಿತ್ಯ ಚೆನ್ನಾಗಿದ್ದರೂ ಅದನ್ನು ಅನುಷ್ಠಾನಕ್ಕೆ ತರುವವರಲ್ಲಿ ದೋಷವಿದ್ದರೆ? ಆದ್ದರಿಂದ ಮೊದಲು ಮನುಷ್ಯ ಒಳ್ಳೆಯವನಾಗಬೇಕು. ಮಾತು ಕೃತಿ, ಆಚಾರ ವಿಚಾರ, ಎಲ್ಲದರಲ್ಲಿಯೂ ಮತಯಾವುದೇ ಇರಲಿ; ಮನುಷ್ಯ ಒಳ್ಳೆಯವನಾಗಿರಬೇಕು. ಅದು ನಮ್ಮ ಸ್ಪಷ್ಟ ನಿಲುವು.

ಸಹೋದರನ್ ಅಯ್ಯಪ್ಪನ್‌ರ ಜೊತೆ ಸಹಜ ಮುದ್ರೆಯೊಂದಿಗೆ ತನ್ನ ಅಭಿಪ್ರಾಯಗಳನ್ನು ಗುರುಗಳು ಹಂಚಿಕೊಳ್ಳುತ್ತಿದ್ದರೇ ಹೊರತು ಯಾವುದೇ ವಿಧಿಗಳನ್ನು ಹೇರುತ್ತಿರಲಿಲ್ಲ. ಗುರುಗಳು ಸಹೋದರನ್ ಅಯ್ಯಪ್ಪನ್‌ರ ಜೊತೆ ವ್ಯವಹರಿಸುತ್ತಿದ್ದ ಕ್ರಮಕ್ಕೆ ಮೇಲಿನ ಸಂಭಾಷಣೆ ಉತ್ತಮ ನಿದರ್ಶನ.

ಟರಾಜಗುರು:

ಗುರುಗಳ ಪ್ರಮುಖ ಶಿಷ್ಯರಲ್ಲೋರ್ವರಾದ ಡಾ.ಪಲ್ಪುರವರ ತ್ರ ನಟರಾಜನ್. ಹುಟ್ಟುವಾಗಲೇ ಆತನನ್ನು ಗುರುಗಳ ಸೇವೆಗೆ ಹಿಸಿಕೊಡುವುದಾಗಿ ಡಾ.ಪಲ್ಪು ಹೇಳಿದ್ದರು. ಪ್ಯಾರಿಸ್‌ನ ಶ್ವವಿದ್ಯಾಲಯವೊಂದರಲ್ಲಿ ಡಾಕ್ಟರೇಟ್ ಪಡೆದ ನಟರಾಜನ್ ವಗಿರಿಯ ಆಶ್ರಮದಲ್ಲಿ ಗುರುಗಳ ಪೂರ್ಣ ಪ್ರಮಾಣದ ಶಿಷ್ಯರಾಗಿ ೇರಿಕೊಂಡರು.

೧೯೨೩ರಲ್ಲಿ 'ನಾರಾಯಣ ಗುರುಕುಲ ಮೂವ್‌ಮೆಂಟ್' ಎಂಬ ಸ್ಥೆಯೊಂದನ್ನು ಸ್ಥಾಪಿಸಿ ಆ ಮೂಲಕ ಗುರುಗಳ ಸಂದೇಶವನ್ನು ಚುರಪಡಿಸುವ ಕೈಂಕರ್ಯವನ್ನು ಕೈಗೆತ್ತಿಕೊಂಡರು. ಐದು ರ್ಷಗಳಕಾಲ ಜಿನೇವಾದಲ್ಲಿ ಭೌತಶಾಸ್ತ್ರದ ಅಧ್ಯಾಪಕರಾಗಿ ಡಿಯುತ್ತಿದ್ದುದಷ್ಟೇ ಅಲ್ಲದೇ ಪ್ರಮುಖ ಪತ್ರಿಕೆಯೊಂದರಲ್ಲಿ ರಂತರ ಲೇಖನಗಳನ್ನು ಬರೆಯುವದರ ಮೂಲಕ ಜಗತ್ತಿನ ಚಿಂತಕರ ಮನ ಸೆಳೆದರು. ಅಮೇರಿಕಾ, ಬೆಲ್ಜಿಯಂ, ಸ್ವಿಟ್ಸರ್‌ಲ್ಯಾಂಡ್, ಗಾಪುರ ಮುಂತಾದ ಜಗತ್ತಿನ ಹದಿನೈದು ಪ್ರಮುಖ ಕೇಂದ್ರಗಳಲ್ಲಿ ಾರಾಯಣ ಗುರುಕುಲ ಮೂವ್‌ಮೆಂಟ್'ನ ಶಾಖೆಗಳನ್ನು ತೆರೆದರು. ರುಗಳು ಸಂಸ್ಕೃತ ಮಲೆಯಾಳಂಗಳಲ್ಲಿ ರಚಿಸಿದ ಕೃತಿಗಳನ್ನು ನುವಾದಿಸಿದರು.

ತನ್ನ ಪ್ರಸಿದ್ಧ ಕೃತಿಯಾದ 'ದ ವರ್ಡ್ ಆಫ್ ದ ಗುರು'ವಿನಲ್ಲಿ ರಾಯಣಗುರುಸ್ವಾಮಿಗಳ ಜೀವನ ಹಾಗೂ ದರ್ಶನಗಳೆರಡನ್ನೂ ತ್ರಿಸಿದ್ದಾರೆ. ಅಂತಿಮ ದಿನಗಳ ಬಗ್ಗೆ ನಟರಾಜಗುರು ತನ್ನ ಕೃತಿಯಲ್ಲಿ ನಮುಟ್ಟುವ ಚಿತ್ರಣ ನೀಡಿದ್ದಾರೆ.

ಅನುಕಂಪಾದಶಕಂ ಮುಂತಾದ ದಶಕಗಳು, ಬ್ರಹ್ಮವಿದ್ಯಾ ಪಂಚಕಂ, ನಿವೃತ್ತಿ ಪಂಚಕಂ ಜೀವಕಾರುಣ್ಯ ಪಂಚಕಂ ಮುಂತಾದ ಪಂಚಕಗಳು, ಆತ್ಮೋಪದೇಶ ಶತಕಂ, ಶಿವಶತಕಂ ಮುಂತಾದ ದಶಕಗಳು ಮಾತ್ರವಲ್ಲದೆ ಜಾತಿನಿರ್ಣಯ ಜಾತಿಲಕ್ಷಣ ಮುಂತಾದ ಹಲವಾರು ಕೃತಿಗಳು ಗುರುಗಳಿಂದ ರಚಿತವಾಗಿವೆ.

ಕುಮಾರನ್ ಆಶಾನ್ ನಟರಾಜಗುರು ಮುಂತಾದವರು ಅವರ ಕೃತಿಗಳ ಅರ್ಥವಿವರಣೆ ವ್ಯಾಖ್ಯಾನ ನೀಡಿದ್ದಾರೆ. ಹೆಚ್ಚಿನ ಕೃತಿಗಳನ್ನು ನಟರಾಜಗುರು ಇಂಗ್ಲೀಷ್‌ಗೆ ಅನುವಾದ ಮಾಡಿದ್ದಾರೆ. ಗುರುಗಳ ಕೃತಿಗಳ ಅನೂಹ್ಯ ಅರ್ಥಗಳ ನಿಮಿತ್ತವಾಗಿ ಸಾಮಾನ್ಯ ಓದುಗರಿಗೆ ಸುಲಭದಲ್ಲಿ ಅವುಗಳು ನಿಲುಕುವುದಿಲ್ಲ. ಅವರ ಕೃತಿಗಳ ಬಗ್ಗೆ ಕುಮಾರನ್ ಆಶಾನ್ ಹೀಗೆ ಹೇಳುತ್ತಾರೆ: ಅವರ ಕೃತಿಗಳಲ್ಲಿನ ಅಲೌಕಿಕವಾದ ಸ್ವಾರಸ್ಯವನ್ನು ಆಸ್ವಾದಿಸ ಬಲ್ಲವರು ಯಾರೇ ಆದರೂ ಆಗಿದ್ದರೂ ಅವುಗಳನ್ನು ವಿಶೇಷವಾಗಿ ಗೌರವಿಸುವರು. ವಿಷಯ ಯಾವುದೇ ಆಗಿದ್ದರೂ ಅದನ್ನು ಪ್ರತಿಪಾದಿಸಲು ಬಳಸುವ ಶಬ್ದಗಳ ನಿಮಿತ್ತವಾಗಿ ಕೆಲವೊಮ್ಮೆ ಅದು ಗ್ರಾಹ್ಯವಾಗಿಯು ತಾಜ್ಯವಾಗಿಯೂ ಪರಿಣಮಿಸುವುದುಂಟು. ಅತ್ಯುನ್ನತ ಮಟ್ಟದ ತತ್ವೋಪದೇಶವೂ ಗುರುಗಳ ಸ್ವಭಾವ ಮನೋಹರವಾಗ ಕವಿತಾ ಮಾಧುರ್ಯವೂ ಸೇರಿ ಸಮ್ಮಿಶ್ರಗೊಂಡಾಗ ನಿರ್ಮಾಣಗೊಳ್ಳುವ ಆಮೋದ ಭೂಮೋದಯಗಳ ಬಗ್ಗೆ ಪ್ರತ್ಯೇಕವಾಗಿ ಹೇಳಬೇಕಾದ ಅಗತ್ಯವಿಲ್ಲ. ಅವರ ಕೃತಿಗಳು ದರ್ಶನ ಶಕ್ತಿಯುಳ್ಳ ಮೌಲಿಕ ಕೃತಿಗಳಾಗಿವೆ.



ಸಾಮಾಜಿಕ ಚಿಂತನ ಮಾಲೆ